ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
53 ನೇ ವರ್ಷಕ್ಕೆ ಪಾದಾರ್ಪಣೆ
1973-2025

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ದಾವಣಗೆರೆ ನಗರವಾಣಿ

ಭಾರತದ 14 ವರ್ಷದ ಹುಡುಗ ವೈಭವ್ ಸೂರ್ಯವಂಶಿ ಈ ವರ್ಷ ಸಿಬಿಎಸ್‌ಇ 10ನೇ ತರಗತಿಯ ಬೋರ್ಡ್ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ಅಂಡರ್–19 ವಿಶ್ವಕಪ್‌ನಲ್ಲಿ ತನ್ನ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಎಲ್ಲರನ್ನೂ ಬೆರಗುಗೊಳಿಸಿದ್ದ ಈ ಬಾಲಕ, ತರಬೇತಿ, ಶಿಬಿರಗಳು ಮತ್ತು ವಿವಿಧ ಪಂದ್ಯಾವಳಿಗಳಲ್ಲಿ ನಿರತನಾಗಿರುವುದರಿಂದ ಪರೀಕ್ಷೆಯನ್ನು ತೆಗೆದುಕೊಳ್ಳದಿರಲು ನಿರ್ಧರಿಸಿದ್ದಾನೆ ಎನ್ನಲಾಗಿದೆ.



ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ    ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್    ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 53 ಸಂಚಿಕೆ: 272 DEVANGERE E nagaravani.com mail: dngrvani@gmail.com ರಿ.ನಂ.24916/73 KA/SK/DVG -012/2023-25 ಸೋಮವಾರ, ಫೆಬ್ರವರಿ 16, 2026 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಹಾಶಿವರಾತ್ರಿ ಹಬ್ಬವನ್ನು ಭಾನುವಾರ ಸಾರ್ವಜನಿಕರು ಶ್ರದ್ಧಾಭಕ್ತಿಯಿಂದ ಆಚರಿಸಿದರು. ಹಬ್ಬದ ಅಂಗವಾಗಿ ಭಾನುವಾರ ಬೆಳಗ್ಗೆಯಿಂದಲೇ ನಗರದ ಪಾತಾಳ ಲಿಂಗೇಶ್ವರ ದೇವಸ್ಥಾನ, ವಿದ್ಯಾನಗರದ ಶಿವ ಪಾರ್ವತಿ ದೇವಸ್ಥಾನ, ಲಿಂಗೇಶ್ವರ ದೇವಸ್ಥಾನ, ಶ್ರೀ ಕಾಶಿ ವಿಶ್ವನಾಥ ದೇವಸ್ಥಾನ ಸೇರಿದಂತೆ ಶಿವನ ದೇವಾಲಯಗಳಲ್ಲಿ ಶಿವನಿಗೆ ವಿಶೇಷವಾಗಿ ಅಲಂಕಾರಗೊಳಿಸಿ ವಿಶೇಷ ಪೂಜೆ-ಪುನಸ್ಕಾರಗಳನ್ನು ನೆರವೇರಿಸಲಾಯಿತು. ಶಿವನ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಹೋಮ ಹವನಗಳನ್ನು ನೆರವೇರಿಸಿ ವಿಶೇಷ ಅಭಿಷೇಕಗಳನ್ನು ನೆರವೇರಿಸಲಾಯಿತು. ಭಕ್ತರು ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.



ಪುಷ್ಪಾಂಜಲಿ ಚಿತ್ರಮಂದಿರ ರಸ್ತೆಯಲ್ಲಿರುವ ಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ



ಪಿಜೆ ಬಡಾವಣೆಯ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಹಾಲಿನ ಅಭಿಷೇಕ




ವಿದ್ಯಾನಗರ ಶಿವ ಪಾರ್ವತಿ ದೇವಸ್ಥಾನದಲ್ಲಿ ವಿಶೇಷ ಪೂಜೆ



ದಾವಣಗೆರೆಯ ಅಥಣಿ ಕಾಲೇಜು ಆವರಣದಲ್ಲಿ ಎತ್ತರದ ಶಿವನಿಗೆ ಪೂಜೆ



ಪಾತಾಳ ಲಿಂಗೇಶ್ವರ ದೇವರಿಗೆ ವಿಶೇಷ ಪೂಜೆ



ಶಿವರಾತ್ರಿ ಪ್ರಯುಕ್ತ ದಾವಣಗೆರೆಯ ಹೊಂಡದ ವೃತ್ತ ಸಮೀಪದ ಪಾತಾಳ ಲಿಂಗೇಶ್ವರ ದೇವಸ್ಥಾನಕ್ಕೆ ಸಾವಿರಾರು ಜನ ಭಕ್ತಾದಿಗಳು ಭೇಟಿ ನೀಡಿ ಶಿವನ ದರ್ಶನ ಪಡೆದು ಪುನೀತರಾದರು.

## ಶಿವರಾತ್ರಿ ಆಚರಣೆ; ಎಲ್ಲೆಡೆ ಶಿವನಾಮ ಸ್ಮರಣೆ
## ಅಹೋರಾತ್ರಿ ನೃತ್ಯ, ಸಂಗೀತ ಸೇವೆಗಳ ಸಮರ್ಪಣೆ

ದಾ ನಗರವಾಣಿ ಸುದ್ದಿ

ದಾವಣಗೆರೆ: ಬೆಣ್ಣೆನಗರಿ ದಾವಣಗೆರೆಯಲ್ಲಿ ಸಾರ್ವಜನಿಕರು ಮಹಾ ಶಿವರಾತ್ರಿಯನ್ನು ಅತ್ಯಂತ ಶ್ರದ್ಧಾಭಕ್ತಿ ಮತ್ತು ಸಡಗರದಿಂದ ಆಚರಿಸಿದರು. ನಗರದ ಪ್ರಮುಖ ಶಿವ ದೇವಾಲಯಗಳಲ್ಲಿ ವಿಶೇಷ ಅಭಿಷೇಕ, ರುದ್ರಪಠಣ, ಮತ್ತು ಜಾಗರಣೆಗಳು ನಡೆದವು.

ಹೊಂಡದ ವೃತ್ತದ ಪಾತಾಳಲಿಂಗೇಶ್ವರ ದೇವಸ್ಥಾನ, ಪಿಜೆ ಬಡಾವಣೆಯ ಕಾಶಿ ವಿಶ್ವನಾಥ ದೇವಸ್ಥಾನ, ಅಶೋಕ ಚಿತ್ರಮಂದಿರದ ಬಳಿಯ ಲಿಂಗೇಶ್ವರ ದೇವಸ್ಥಾನ, ಪಿ.ಬಿ ರಸ್ತೆಯ ಬೀರಲಿಂಗೇಶ್ವರ ದೇವಸ್ಥಾನ ಮತ್ತು ವಿದ್ಯಾನಗರದ ಈಶ್ವರ ಪಾರ್ವತಿ ದೇವಾಲಯಗಳಲ್ಲಿ ಅದ್ಧೂರಿ ಪೂಜೆಗಳು ನಡೆದವು. ಭಕ್ತರು ಬೆಳಗ್ಗಿನಿಂದಲೇ ಸರತಿ ಸಾಲಿನಲ್ಲಿ ನಿಂತು ಶಿವನ ದರ್ಶನ ಪಡೆದರು.

ಶಿವನಿಗೆ ಹಾಲು, ಜೇನುತುಪ್ಪ, ಗಂಧ, ಮತ್ತು ಬಿಲ್ವಪತ್ರೆಗಳಿಂದ ವಿಶೇಷ ಅಭಿಷೇಕ ಹಾಗೂ ಅಲಂಕಾರ ಮಾಡಲಾಯಿತು. ನಗರದ ವಿವಿಧ ದೇವಸ್ಥಾನಗಳಲ್ಲಿ ಬಿಲ್ವಪತ್ರೆ ಅರ್ಪಿಸಿ, ಭಜನೆ ಹಾಗೂ ಅನ್ನದಾಸೋಹಗಳು ನಡೆದವು. ಇನ್ನೂ ಕೆಲವೆಡೆ ಸಂಜೆ 6 ರಿಂದ ಬೆಳಗಿನ ಜಾವದವರೆಗೆ ಶಿವನಿಗೆ ಭಜನೆ, ರುದ್ರಪಠಣ ಮತ್ತು ಓಂ ನಮಃ ಶಿವಾಯ ಮಂತ್ರ ಘೋಷದೊಂದಿಗೆ ಜಾಗರಣೆ ಆಚರಿಸಲಾಯಿತು.

ಅನೇಕ ಭಕ್ತರು ಮತ್ತು ಸಂಘಟನೆಗಳಿಂದ ದೇವಾಲಯದ ಆವರಣದಲ್ಲಿ ಪ್ರಸಾದ ಹಾಗೂ ಮಜ್ಜಿಗೆ ವಿತರಣೆ, ಅನ್ನದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಇಡೀ ನಗರವು 'ಶಿವಮಯ'ವಾಗಿತ್ತು. ಭಕ್ತರು ಉಪವಾಸವಿದ್ದು ಶಿವನ ಆರಾಧನೆ ಮಾಡಿದರು. ನಗರದ ಎಸ್.ಎಸ್.ಬಡಾವಣೆಯಲ್ಲಿರುವ ಅಥಣಿ ಕಾಲೇಜ್ ಆವರಣದಲ್ಲಿರುವ ಎತ್ತರದ ಶಿವನ ಮೂರ್ತಿ ಮುಂಭಾಗ ಚಿರಂತನ ಸಂಸ್ಥೆ ವತಿಯಿಂದ 'ಶಿವರಾತ್ರಿ ಉತ್ಸವ'ವನ್ನು ಹಮ್ಮಿಕೊಳ್ಳಲಾಗಿತ್ತು.

ನಮನ ಅಕಾಡೆಮಿ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ "ಶಿವಸ್ಮರಣೆ ನೃತ್ಯ ಜಾಗರಣೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಹಿಂದೂಸ್ತಾನಿ ಗಾಯಕ ಆನಂದಗೌಡ ಪಾಟೀಲ್ ಹಾಗು ಡಾ|| ಶೃತಿರಾಜ್ ಗಾಯನ ಸೇವೆ ನೆರವೇರಿಸಿದರು.

ಭಾನುವಾರ ರಾತ್ರಿ 9.00 ರಿಂದ ಬೆಳಗಿನ ಜಾವ 4.00 ಗಂಟೆಯವರೆಗೆ ದಾವಣಗೆರೆಯ ಪ್ರತಿಷ್ಠಿತ ನಾಲ್ಕು ದೇವಸ್ಥಾನಗಳಲ್ಲಿ ಒಂದರ ನಂತರ ಒಂದರಂತೆ ನೃತ್ಯಸೇವೆಯನ್ನು ಮಾಡುವ ಮೂಲಕ ಶಿವನಿಗೆ "ಶಿವಸ್ಮರಣೆ"ಯನ್ನು ನಮನ ಅಕಾಡೆಮಿ ವಿದ್ಯಾರ್ಥಿಗಳು ನೃತ್ಯ ಜಾಗರಣೆಯ ಮೂಲಕ ಅರ್ಪಿಸಿದರು.

ನಗರದ ರಿಂಗ್ ರಸ್ತೆಯಲ್ಲಿರುವ "ಶ್ರೀ ಶಾರದಾ ಮಂದಿರ"ದಲ್ಲಿ, ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ, ಜಯದೇವ ಸರ್ಕಲ್‌ನಲ್ಲಿರುವ ಶ್ರೀ ಕೂಡಲಿ ಶಂಕರ ಮಠದಲ್ಲಿ, ವಿದ್ಯಾನಗರದ ಶ್ರೀ ಶಿವ ಪಾರ್ವತಿ ದೇವಸ್ಥಾನದಲ್ಲಿ ನೃತ್ಯ ಸೇವೆಯನ್ನು ಮಾಡುವುದರ ಮೂಲಕ ಶಿವನಿಗೆ ನೃತ್ಯ ಜಾಗರಣೆಯನ್ನು ಸಮರ್ಪಿಸಿದರು.

(3ನೇ ಪುಟಕ್ಕೆ)



ಬಿಐಇಟಿ ರಸ್ತೆಯ ಶಿವಧ್ಯಾನ ಮಂದಿರ

## ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೆ ಶಿಫಾರಸ್ಸು ಮಾಡಲಿ: ಬಸವಮಾಚಿದೇವ ಶ್ರೀ ಒತ್ತಾಯ

ದಾ.ನಗರವಾಣಿ ಸುದ್ದಿ

ಜಗಳೂರು, ಫೆ.15: ಡಾ. ಅನ್ನಪೂರ್ಣಮ್ಮ ವರದಿಯನ್ವಯ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸಲು ರಾಜ್ಯ ಸರಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಲಿ ಎಂದು ಚಿತ್ರದುರ್ಗ ಮಡಿವಾಳ ಮಾಚಿದೇವ ಮಠದ ಬಸವಮಾಚಿದೇವ ಸ್ವಾಮೀಜಿ ಒತ್ತಾಯಿಸಿದರು.

ಭಾನುವಾರ ತಾಲ್ಲೂಕಿನ ಅಸಗೋಡು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮಡಿವಾಳಮಾಚಿದೇವ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದೇಶದಲ್ಲಿ ಕೇರಳ, ಹರಿಯಾಣ, ರಾಜಸ್ಥಾನ ಸೇರಿದಂತೆ 18 ರಾಜ್ಯಗಳಲ್ಲಿಯೂ ಮಡಿವಾಳ ಸಮುದಾಯ ಪ.ಜಾತಿಯ ಪಟ್ಟಿಯಲ್ಲಿದೆ. ಕರ್ನಾಟಕದಲ್ಲಿಯೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸ್ಥಾನಮಾನಗಳಿಗಾಗಿ ಪ.ಜಾತಿಯ ಮೀಸಲಾತಿ ಅಗತ್ಯವಿದೆ. ಸಮಾಜದವರು ಜಾಗೃತರಾಗಿ ಒಗ್ಗಟ್ಟಿನಿಂದ ಮೀಸಲಾತಿಗೆ ಹೋರಾಡಬೇಕಿದೆ ಎಂದು ಕರೆ ನೀಡಿದರು.



ಶೋಷಿತ ಸಮುದಾಯಗಳು ಶಿಕ್ಷಣದಿಂದ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯ. ಶೋಷಿತ ಸಮುದಾಯಗಳಿಗೆ ಅಂಟಿದ ಕಳಂಕವನ್ನು ತೊಳೆಯಲು ಬಸವಾದಿ ಶರಣರು ಜನಿಸಿದ್ದರು. ಜ್ಯೋತಿ,ಜಾಗೃತಿಯ ಸೂಚಕರಾಗಿದ್ದರು. ಮಹನೀಯರ ಜಯಂತಿಗಳು ಕೇವಲ ಭಾವಚಿತ್ರಕ್ಕೆ ಸೀಮಿತವಾಗಿವೆ. ದಾರ್ಶನಿಕರತತ್ವಾದರ್ಶ ಆಚರಿಸುವಲ್ಲಿ ಪ್ರತಿಯೊಬ್ಬ ಸಮಾಜಗಳೂ ವಿಫಲವಾಗಿವೆ.

(2ನೇ ಪುಟಕ್ಕೆ)

## ಟಿ–20; ಪಾಕ್ ಬಗ್ಗು ಬಡಿದ ಭಾರತ

ಕೊಲಂಬೊ: ಇಲ್ಲಿನ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಸಿಸಿ ಟಿ–20 ವಿಶ್ವಕಪ್ ಟೂರ್ನಿಯ ಗ್ರೂಪ್ ಹಂತದ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಭಾರತ 61 ರನ್ ಗಳಿಂದ ಬಗ್ಗುಬಡಿದೆ.

ಇಶಾನ್ ಕಿಶಾನ್ ಅವರ ಅಬ್ಬರ ಬ್ಯಾಟಿಂಗ್ ಹಾಗೂ ಸ್ಪಿನ್ನರ್ ಗಳ ಮಾರಕ ಬೌಲಿಂಗ್ ದಾಳಿಯಿಂದ ಟ್ರಿಕಿ ಪಿಚ್ ನಲ್ಲೂ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಭಾರತ, ದೇಶದ ಜನತೆಗೆ ಮಹಾಶಿವರಾತ್ರಿ ಗಿಫ್ಟ್ ನೀಡಿದ್ದು, ದೇಶಾದ್ಯಂತ ಕ್ರಿಕೆಟ್ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಇಳಿದ ಭಾರತದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಡಕ್ ಔಟ್ ಆದರು. ಪಾಕಿಸ್ತಾನ ನಾಯಕ ಸಲ್ಮಾನ್ ಆಘಾ ಅವರ ಮೊದಲ ಓವರ್ ನ ಆರನೇ ಎಸೆತದಲ್ಲಿ ಮಾಸ್ಟರ್‌ಸ್ಟ್ರೋಕ್ ಎಂದು ಸಾಬೀತಾಯಿತು. ಅಭಿಷೇಕ್ ಶರ್ಮಾ ಇಂದು ದೊಡ್ಡ ಇನ್ನಿಂಗ್ಸ್ ಆಡುತ್ತಾರೆಂದು ನಿರೀಕ್ಷಿಸಲಾಗಿತ್ತು. ಆದರೆ ಡಕೌಟ್ ಆಗುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು.





ಆದಾಗ್ಯೂ ಪಾಕಿಸ್ತಾನ ಬೌಲರ್ ಗಳ ಬೆವರಿಳಿಸಿದ ಇಶಾನ್ ಕಿಶಾನ್ 27 ಎಸೆತಗಳಲ್ಲಿ ವೇಗವಾಗಿ ಅರ್ಧ ಶತಕ ಬಾರಿಸಿದರು. 40 ಎಸೆತಗಳನ್ನು ಎದುರಿಸಿದ ಇಶಾನ್, ಮೂರು ಸಿಕ್ಸರ್, 10 ಬೌಂಡರಿಗಳೊಂದಿಗೆ 77 ರನ್ ಗಳಿಸಿದರು.

ಉಳಿದಂತೆ ತಿಲಕ್ ವರ್ಮಾ, 25, ನಾಯಕ ಸೂರ್ಯ ಕುಮಾರ್ ಯಾದವ್ 32, ಶಿವಂ ದುಬೆ 27, ರಿಂಕ್ ಸಿಂಗ್ ಔಟಾಗದೇ 11 ರನ್ ಗಳಿಸಿದರು. ಇಶಾನ್ ಕಿಶಾನ್ ಅವರ 77 ರನ್ ಗಳ ನೆರವಿನಿಂದ ಟೀಂ ಇಂಡಿಯಾ ನಿಗದಿತ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು.

ಪಾಕಿಸ್ತಾನ ಪರ ಸೈಮ್ ಅಯುಬ್ 3 ವಿಕೆಟ್ ಪಡೆದರೆ, ಸಲ್ಮಾನ್ ಆಘಾ, ಶಹೀನ್ ಶಾ ಅಫ್ರಿದಿ, ಉಸ್ಮಾನ್ ತಾರಿಖ್ ತಲಾ ಒಂದು ವಿಕೆಟ್ ಪಡೆದರು. ಭಾರತ ನೀಡಿದ 176 (2ನೇ ಪುಟಕ್ಕೆ)

### ಯಶಸ್ಸು ನಿಮ್ಮದೇ...

ನಿಮ್ಮ ಮನೆಯಲ್ಲಿ ಪರೀಕ್ಷೆ ಬರೆಯುವ ಮಕ್ಕಳಿದ್ದಾರೆಯೇ? ಅವರನ್ನು ಭಾವನಾತ್ಮಕವಾಗಿ ಸಬಲಗೊಳಿಸಿ, ಕೌಶಲ್ಯಗಳನ್ನು ವೃದ್ಧಿಸುವ "ಯಶಸ್ಸು ನಿಮ್ಮದೇ" ಎಂಬ ಲೇಖನ ಮಾಲಿಕೆ ಫೆಬ್ರವರಿ 18ರಿಂದ ನಿಮ್ಮ ದಾವಣಗೆರೆ ನಗರವಾಣಿ ಪತ್ರಿಕೆಯಲ್ಲಿ ಪ್ರಾರಂಭವಾಗಲಿದೆ. ಶಿಕ್ಷಣ ಕ್ಷೇತ್ರದಲ್ಲಿ 30ಕ್ಕೂ ಹೆಚ್ಚು ವರ್ಷಗಳ ಅನುಭವ ಇರುವ ನಮ್ಮ ಅಂಕಣಕಾರರಾದ ಜಗನ್ನಾಥ ನಾಡಿಗೇರ್ ಅವರು ಇದನ್ನು ಪ್ರಸ್ತುತಪಡಿಸುತ್ತಿದ್ದಾರೆ. ಈ ಮಾಲಿಕೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಪೋಷಕರಿಗೆ ಅತ್ಯುಪಯುಕ್ತವಾಗಲಿದೆ.

– ಸಂಪಾದಕರು

## ಕುರುವತ್ತಿ ರಥೋತ್ಸವಕ್ಕೆ ಭಕ್ತರಿಂದ ಪಾದಯಾತ್ರೆ





ದಾ.ನಗರವಾಣಿ ಸುದ್ದಿ

ದಾವಣಗೆರೆ.ಫೆ,15: ಇಲ್ಲಿನ ಬಕ್ಕೇಶ್ವರ ದೇವಸ್ಥಾನದಿಂದ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಶ್ರೀಕ್ಷೇತ್ರ ಕುರುವತ್ತಿಯ ಮಲ್ಲಿಕಾರ್ಜುನಸ್ವಾಮಿ ಹಾಗೂ ಬಸವೇಶ್ವರಸ್ವಾಮಿ ರಥೋತ್ಸವದ ಅಂಗವಾಗಿ ಭಕ್ತಾದಿಗಳು ನಗರದಿಂದ ಭಾನುವಾರ ಸಂಜೆ ಪಾದಯಾತ್ರೆ ಆರಂಭಿಸಿದರು.

ನಗರದ ಹೊಂಡದ ಸರ್ಕಲ್ ಮಾರ್ಗವಾಗಿ ಆರಂಭವಾದ ಈ ಪಾದಯಾತ್ರೆಯು ಕೊಂಡಜ್ಜಿ ರಸ್ತೆ, ಆವರಗೊಳ್ಳ, ಕಕ್ಕರಗೊಳ್ಳ, ಕೊಂಡಜ್ಜಿ, ಕುರುಬರಹಳ್ಳಿ ಕ್ರಾಸ್, ಶಾಂತಿನಗರ ಕ್ರಾಸ್, ವಟ್ಲಹಳ್ಳಿ, ನಂದ್ಯಾಲ ಕ್ರಾಸ್, ನಿಟ್ಟೂರು ಕ್ರಾಸ್, ಹಲವಾಗಲು, ಸಿದ್ಧಾಪುರ ಹರವಿ ಕ್ರಾಸ್ ಹಾಗೂ ಲಿಂಗನಾಯಕನಹಳ್ಳಿ ಮಾರ್ಗವಾಗಿ ಸಾಗಲಿದೆ. ಸುಮಾರು 60 ಕಿಲೋಮೀಟರ್ ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಲಿರುವ ಭಕ್ತರು, ಫೆಬ್ರವರಿ 16ರ ಸೋಮವಾರ ಸಂಜೆ ಕುರುವತ್ತಿ ಕ್ಷೇತ್ರವನ್ನು ತಲುಪಲಿದ್ದಾರೆ.

ಪಾದಯಾತ್ರಿಗಳ ಅನುಕೂಲಕ್ಕಾಗಿ ಮಾರ್ಗದುದ್ದಕ್ಕೂ ವಿವಿಧ ಸಂಘ–ಸಂಸ್ಥೆಗಳಿಂದ ಹಾಗೂ ಭಕ್ತರಿಂದ ಪ್ರಸಾದ ವಿನಿಯೋಗ ಮತ್ತು ತುರ್ತು ಔಷಧೋಪಚಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಸಂದರ್ಭದಲ್ಲಿ ಮುಖಂಡರಾದ ಇ.ಪಿ. ಪ್ರಕಾಶ್, ಶಿವಾನಂದನಪ್ಪ, ಎನ್.ಬಿ. ವೇದಮೂರ್ತಿ, ಎ.ಬಿ. ಸುರೇಶ್ ಸೇರಿದಂತೆ ನೂರಾರು ಭಕ್ತಾದಿಗಳು ಉಪಸ್ಥಿತರಿದ್ದರು.

## ನಮ್ಮ ಪೊಲೀಸರು ದೇಶದಲ್ಲೇ ನಂ.1: ಪರಮೇಶ್ವರ್ ಮೆಚ್ಚುಗೆ

ಮಡಿಕೇರಿ: ನ್ಯಾಯ ಒದಗಿಸೋದ್ರಲ್ಲಿ ಕರ್ನಾಟಕ ಪೊಲೀಸರು ದೇಶದಲ್ಲೇ ನಂ.1 ಸ್ಥಾನದಲ್ಲಿದ್ದಾರೆ ಎಂದು ಗೃಹಸಚಿವ ಜಿ. ಪರಮೇಶ್ವರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆ ಕುಶಾಲನಗರ ತಾಲೂಕಿನ ಸುಂಟಿಕೊಪ್ಪ ಗ್ರಾಮದಲ್ಲಿ ಪೊಲೀಸರ ನೂತನ ವಸತಿ ಗೃಹ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಇಂದು ಮಹಿಳೆಯರು ಸುರಕ್ಷಿತವಾಗಿ ಓಡಾಟ ನಡೆಸಲು ಇಡೀ ದೇಶದಲ್ಲೇ ಮೊದಲ ನಗರ ಯಾವುದು ಅಂದ್ರೆ ಬೆಂಗಳೂರು ಇದೆ. ಕರ್ನಾಟಕ ಪೊಲೀಸರು ನ್ಯಾಯ ಒದಗಿಸೋದ್ರಲ್ಲಿ ನಂ.1 ಸ್ಥಾನದಲ್ಲಿದ್ದಾರೆ. ವಿಪಕ್ಷದವರು ಸುಮ್ಮನೆ ಟೀಕೆ ಮಾಡ್ತಾರೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಅಂತಾರೆ.

(4ನೇ ಪುಟಕ್ಕೆ)

## ಉಕ್ಕಡಗಾತ್ರಿ ರಥೋತ್ಸವಕ್ಕೆ ಭರದ ಸಿದ್ಧತೆ

ದಾ ನಗರವಾಣಿ ಸುದ್ದಿ

ಮಲೇಬೆನ್ನೂರು : ದಕ್ಷಿಣ ಭಾರತದ ಕಾಶಿ ಕ್ಷೇತ್ರವೆಂದೇ ಹೆಸರು ಪಡೆದಿರುವ ಪವಾಡಗಳ ಪುಣ್ಯ ಭೂಮಿಯಾಗಿ ಸುಕ್ಷೇತ್ರವೆನಿಸಿದ ಉಕ್ಕಡಗಾತ್ರಿಯ ಆದಿದೈವ ಶ್ರೀ ಗುರು ಕರಿಬಸವೇಶ್ವರ ಗದ್ದಿಗೆಯ ಮಹಿಮೆಯು ನಾಡಿನ ಮೂಲೆ ಮೂಲೆಗಳಲ್ಲಿ ಜನಮನಗಳಲ್ಲಿ ಮಹಾದಿವ್ಯ ಚೇತನವಾಗಿ ನೆಲೆಸಿದೆ.

ಮಹಾ ಶಿವರಾತ್ರಿಯ ಜಾತ್ರಾ ಮಹೋತ್ಸವವು ಏ.17 ರಿಂದ ಫೆ. 24ರ ವರೆಗೆ ನಡೆಯಲಿದ್ದು ಸನ್ನಿಧಿಗೆ ಒಂದು ವಾರಗಳ ಕಾಲ ರಾಜ್ಯ ಮತ್ತು ಹೊರ ರಾಜ್ಯಗಳಿಂದ ಮಹಾ ರಥೋತ್ಸವಕ್ಕೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಭಕ್ತರಿಗೋಸ್ಕರವೇ ಸೇವೆ ಸಲ್ಲಿಸುತ್ತಿರುವ ಗದ್ದಿಗೆ ಟ್ರಸ್ಟ್ ಕಮಿಟಿಯವರು ಈಗಾಗಲೇ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಸೌಲಭ್ಯಗಳು : ತುಮ್ಮಿನಕಟ್ಟೆ ರಸ್ತೆಯಲ್ಲಿ 3, ಕುಪ್ಪೇಲೂರು ರಸ್ತೆಯಲ್ಲಿ 2 ಮತ್ತು ನಿಟುವಳ್ಳಿ ರಸ್ತೆಯಲ್ಲಿ 2 ಕಡೆ ವಿಶಾಲವಾದ ಜಾಗದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.



ದೇವಸ್ಥಾನದ ದಾಸೋಹ ಕಟ್ಟಡದ ಹಿಂಭಾಗ ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಡಾರ್ಮೆಟರಿ ಸೌಕರ್ಯ ಒದಗಿಸಲಾಗಿದೆ.

ಭಕ್ತರ ಭದ್ರತೆಯ ಹಿತದೃಷ್ಟಿಯಿಂದ ದೇವಸ್ಥಾನ ಮತ್ತು ಸುತ್ತಾಮುತ್ತ 200 ಸಿಸಿ ಕ್ಯಾಮರಗಳನ್ನು ಹಾಕಿಸಲಾಗಿದೆ. ಸ್ವಚ್ಛತೆಗೆ ಆದ್ಯತೆ ನೀಡಲು ಸ್ವಯಂ ಸೇವಕರನ್ನು ನೇಮಿಸಿಕೊಳ್ಳಲಾಗಿದೆ. ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಅಗ್ನಿಶಾಮಕದಳ, ಸಾರಿಗೆ ಇಲಾಖೆಗಳಿಂದ ಸೌಲಭ್ಯಗಳನ್ನು ಪಡೆಯಲಾಗಿದೆ.

(4ನೇ ಪುಟಕ್ಕೆ)

# ಅನ್ನದಾನ ಪುಣ್ಯದ ಕೆಲಸ: ಚಿತ್ರನಟ ಪ್ರೇಮ್



ದಾ.ನಗರವಾಣಿ ಸುದ್ದಿ

ಜಗಳೂರು, ಫೆ.14: ಜಗಳೂರಿನಲ್ಲಿ ಬೆಂಗಳೂರಿನ ಮಾದರಿಯಲ್ಲಿ ಹೋಟೆಲ್ ಉದ್ಯಮ ಆರಂಭಿಸಿ ಸಮಾಜದಲ್ಲಿ ಅನ್ನದಾನಕ್ಕೆ ಮುಂದಾಗಿರುವುದು ಪುಣ್ಯದ ಕೆಲಸ ಎಂದು ಚಲನಚಿತ್ರ ನಟ ಪ್ರೇಮ್ ಹೇಳಿದರು.

ಪಟ್ಟಣದ ಚಳ್ಳಕೆರೆ ರಸ್ತೆಯಲ್ಲಿ ನೂತನ ಕೆಎ 17 ಫ್ಯಾಮಿಲಿ ರೆಸ್ಟೋರೆಂಟ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬರ್ಕತ್ ಅಲಿ ಕುಟುಂಬ ಕ್ಷೇತ್ರದಲ್ಲಿ ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೆ ಏರಲಿ, ಹಸಿದವರಿಗೆ ಅನ್ನ ನೀಡುವ ಶಕ್ತಿ ಹೆಚ್ಚಾಗಲಿ, ಕುಟುಂಬಕ್ಕೆ ಶ್ರೇಯಸ್ಸು ಲಭಿಸಲಿ ಹಾಗೂ ಶಾಸಕ ಬಿ.ದೇವೇಂದ್ರಪ್ಪ ಅವರು ಸಹೃದಯಿ, ಜನಾನುರಾಗಿಯಾಗಿ ,ಅಪಾರ ಜ್ಞಾನ ಹೊಂದಿದ್ದಾರೆ. ಎಲ್ಲರ ಸಹಕಾರದಿಂದ ಜಗಳೂರು ಸಮೃದ್ಧ ನಾಡಾಗಲಿ ಎಂದು ಹಾರೈಸಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಸಾಕಷ್ಟು ಹಣವಂತರಿದ್ದಾರೆ. ಆದರೆ ಹೃದಯ ಶ್ರೀಮಂತಿಕೆ ಬೇಕಿದೆ. ಬರ್ಕತ್ ಅಲಿ, ನಬಿ ಸಹೋದರರು ಬೆಂಗಳೂರಿನಲ್ಲಿ ಉದ್ಯೋಗ ಅರಸಿ ಹೋಗಿದ್ದರೂ ನಂತರ ಜನ್ಮಭೂಮಿಗೆ ಮರಳಿ ಜೈ ಭಾರತ್ ಟ್ರಸ್ಟ್ ಮೂಲಕ ಆರೋಗ್ಯ ಸೇವೆ, ದಾನ ಧರ್ಮದ ಸಮಾಜ ಮುಖಿ ಕಾರ್ಯಗಳೊಂದಿಗೆ ದಾಪುಗಾಲು ಇಟ್ಟಿದ್ದಾರೆ. ಕ್ಷೇತ್ರ ವ್ಯಾಪಿ ಧರ್ಮಾತೀತ, ಜಾತ್ಯಾತೀತವಾಗಿ ವಿಶ್ವಾಸ ಗಳಿಸುವ ಮೂಲಕ ಜನರ ಮನಸ್ಸು ಗೆಲ್ಲುತ್ತಿರುವುದು ಶ್ಲಾಘನೀಯ ಎಂದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾವರ್ಗದ ಬಡಜನರಿಗೆ ಗ್ಯಾರಂಟಿ ಯೋಜನೆಗಳ ಮೂಲಕ ಗ್ಯಾರಂಟಿ ರಾಮಯ್ಯ ರಾಗಿ ಜನಮಾನಸದಲ್ಲಿ ಉಳಿದಿದ್ದಾರೆ. ಕ್ಷೇತ್ರದಲ್ಲಿ ನೀರಾವರಿ ಯೋಜನೆ, ಮೂಲಸೌಕರ್ಯಗಳೊಂದಿಗೆ ಸಮಗ್ರ ಅಭಿವೃದ್ದಿಗೆ ಆದ್ಯತೆ ನೀಡುತ್ತಿರುವೆ. ಅಭಿವೃದ್ದಿ ಕಾಮಗಾರಿಗಳಿಗೆ ಪಕ್ಷಾತೀತ ಸಹಕಾರ ನೀಡಬೇಕು ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕರಾದ ಕಂಬದ ರಂಗಯ್ಯ, ದಿಯಾ ಹೆಗ್ಡೆ ಅವರ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಿತು.

ಇದೇ ವೇಳೆ ನಟಿ ಸಂಜನಾವರ್ಧನ್, ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರ, ಎಚ್.ಪಿ.ರಾಜೇಶ್, ಸಚಿವ ಎಸ್ ಎಸ್ ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್, ಕೆಪಿಸಿಸಿ ಎಸ್ ಟಿ ಘಟಕದ ಕೆ.ಪಿ.ಪಾಲಯ್ಯ, ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್, ಬಿಜೆಪಿ ಯುವ ಮುಖಂಡ ಬಿಸ್ತುವಳ್ಳಿ ಬಾಬು, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ಅವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಜೈಭಾರತ್ ಟ್ರಸ್ಟ್‌ನ ಕಾರ್ಯದರ್ಶಿ ನಬಿವುಲ್ಲಾ, ಬರ್ಕತ್ ಅಲಿ ಸೇರಿದಂತೆ ತಾಲ್ಲೂಕಿನ ವಿವಿಧ ಮುಖಂಡರುಗಳು ಭಾಗವಹಿಸಿದ್ದರು.

# ಪ್ರತ್ಯೇಕ ಜಯಂತಿ ಆಚರಣೆಗೆ ಶಿಫಾರಸ್ಸು



ದಾ ನಗರವಾಣಿ ಸುದ್ದಿ

**ಬಿ ಪಿ ಹರೀಶ್**

ಹರಿಹರ : ವಚನಗಳ ರಚನೆ ಮಾಡುವ ಮೂಲಕ ಕಾಯಕ ಶರಣ-ರು ಕಾಯಕನಿಷ್ಠೆ, ತ್ಯಾಗ ಸೇವೆ ಮಾಡುವ. ಕಾಯಕದ ಮಹತ್ವವನ್ನು ಸಮಾಜಕ್ಕೆ ಸಾರಿದ್ದಾರೆ ಎಂದು ಶಾಸಕ ಬಿ.ಪಿ ಹರೀಶ್ ಹೇಳಿದರು.

ನಗರದ ತಹಶಿಲ್ದಾರ ಕಛೇರಿಯಲ್ಲಿ ಮಂಗಳವಾರ ತಾಲ್ಲೂಕ ಆಡಳಿತದಿಂದ ಆಯೋಜಿಸಿದ ಕಾಯಕ ಶರಣರ ಜಯಂತ್ಯೋತ್ಸವದ ಕಾರ್ಯಕ್ರಮದಲ್ಲಿ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ್ ಕಕ್ಕಯ್ಯ, ಉರಿಲಿಂಗ ಪೆದ್ದಿ, ಸಮಗಾರ ಹರಳಯ್ಯ ಅವರ ಮಹನೀಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಕಾಯಕ ಶರಣರ ಜಯಂತಿ ಆಚರಿಸಿ ನಿತ್ಯ ಜೀವನದಲ್ಲಿ ಕಾಯಕ ತತ್ವ ಅಳವಡಿಸಿಕೊಂಡಲ್ಲಿ ವೈಯಕ್ತಿಕ ಮತ್ತು ಸಮುದಾಯದ ಅಭಿವೃದ್ಧಿ ಹೊಂದಲು ಸಾಧ್ಯ ಎಂದ ಅವರು ಮಾದಾರ ಚನ್ನಯ್ಯ ಜಯಂತಿ ಜೊತೆಗೆ ಮಾದಾರ ಧೂಳಯ್ಯ, ಡೋಹರ್ ಕಕ್ಕಯ್ಯ, ಉರಿಲಿಂಗ ಪೆದ್ದಿ, ಸಮಗಾರ ಹರಳಯ್ಯ ಅವರ ಜಯಂತಿಗಳನ್ನು ಪ್ರತ್ಯೇಕವಾಗಿ ಆಚರಣೆ ಮಾಡುವಂತೆ ದಲಿತ ಸಮುದಾಯದ ಮುಖಂಡರುಗಳು ಕೋರಿಕೆಯ ಹಿನ್ನೆಲೆಯಲ್ಲಿ ಮುಂದಿನ ಸದನದಲ್ಲಿ ಇದರ ಬಗ್ಗೆ ಮಾತನಾಡುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ತಹಶಿಲ್ದಾರರ ಮಾತನಾಡಿ ಶಿವ ಶರಣರಾದ ಮಾದರ ಚನ್ನಯ್ಯ ಭಕ್ತಿ ಪಂಥದ ಮೂಲಕ ಸಮಾಜದ ಅಂಕುಡೊಂಕ ಗಳನ್ನು ತಿದ್ದವಲ್ಲಿ ಹಾಗೂ ಕಾಯಕ ನಿಷ್ಠೆ ಯ ಮೂಲಕ ಸಮಾಜದಲ್ಲಿ ಸಮಾನತೆ ಬೆಳಕು ಚೆಲ್ಲುವಲ್ಲಿ ಇವರು ಕಾರ್ಯ ಶ್ಲಾಘನೀಯವಾದದ್ದು ಎಂದರು. ನಿವೃತ್ತ ಅಧಿಕಾರಿ ಡಾ. ಎ.ಕೆ ಭೂಮೇಶ್ ಮಾತನಾಡಿ, ಮಾದಾರ ಚನ್ನಯ್ಯ ನವರು ಅವರು ತಮ್ಮ ಕಾಯಕದಿಂದಲೇ ಶಿವನನ್ನು ಒಲಿಸಿಕೊಂಡು,ಅಂಬಲಿಯನ್ನು ಸೇವೆಗೆ ನೀಡಿದ್ದ ಮಹಾನ್ ಕಾಯಕಯೋಗಿ ಆಗಿದ್ದಾರೆ. ತಮ್ಮ ವಚನಗಳ ಮೂಲಕ ಸಮಾಜದ ಅನೇಕ ಅಸಮಾನತೆಗಳನ್ನು ದೂರ ಮಾಡುವಲ್ಲಿ ಮಾದಾರ ಚನ್ನಯ್ಯ ಅಗ್ರಗಣ್ಯರಾಗಿದ್ದಾರೆ ಎಂದು ಹೇಳಿದರು.

ಈ ವೇಳೆ ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಬಸವರಾಜ್, ತಾಲೂಕು ಆರೋಗ್ಯ ಇಲಾಖೆಯ ಡಾ, ಅಬ್ದುಲ್ ಖಾದರ್, ಪಶು ಇಲಾಖೆಯ ಡಾ, ತಿಪ್ಪೇಸ್ವಾಮಿ, ಸಮಾಜಕಲ್ಯಾಣ ಇಲಾಖೆಯ ಹನುಮಂತಪ್ಪ ಲಮಾಣಿ, ಸಮಾಜದ ಮುಖಂಡರಾದ ಡಿ,ಹನುಮಂತಪ್ಪ, ಪ್ರಕಾಶ್ ಮಂಜುನಾಥ್, ಪತ್ರಕರ್ತರಾದ ಹೆಚ್,ಸುಧಾಕರ್, ಜಿ.ಕುಮಾರ್ ಗಂಗನರಸಿ, ಗುರುನಾಥ್ ಇಟಗಿ ಸೇರಿದಂತೆ ಇತರರಿದ್ದರು.

# ಮಡಿವಾಳ ಸಮಾಜವನ್ನು ಪರಿಶಿಷ್ಟ...

(1ನೇ ಪುಟದಿಂದ)

ಶರಣರು ಪದವಿ ಪಡೆದಿರಲಿಲ್ಲ ಅವರ ಅನುಭವವೇ ಪಿಎಚ್ ಡಿ ಪದವಿಗಳಾಗಿದ್ದವು. ಒಂದು ವಚನ ಸಾಹಿತ್ಯದ ಮೇಲೆ ಹಲವಾರು ಪಿಎಚ್.ಡಿ ಗಳಿಸಬಹುದು ಎಂದು ನಿದರ್ಶನ ನೀಡಿದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಭಾಗವಹಿಸಿ ಮಾತನಾಡಿ, ನನ್ನ ಆಡಳಿತಾವಧಿಯಲ್ಲಿ ಮಡಿವಾಳ ಸಮಾಜಕ್ಕೆ ಜಗಳೂರು ಪಟ್ಟಣದಲ್ಲಿ ನಿವೇಶನ ಒದಗಿಸಿರುವೆ. ಸಾಮಾಜಿಕ ನ್ಯಾಯದಡಿ ಮಡಿವಾಳ ಸಮಾಜದವರನ್ನು ಗುರುತಿಸಿ ಇಬ್ಬರು ಮಹಿಳೆಯರನ್ನು ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಮಡಿವಾಳ ಸಮಾಜದ ಬಗ್ಗೆ ಅವಿನಾಭಾವ ಸಂಬಂಧವಿದೆ. ಸಮಾಜದ ಸ್ವಾಮೀಜಿ ಅವರು ನನ್ನ ಶ್ರೇಯಸ್ಸು ಬಯಸುವ ಹಿತೈಷಿಗಳಾಗಿದ್ದಾರೆ ಎಂದು ತಿಳಿಸಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ರಾಜ್ಯದಲ್ಲಿ ಮಡಿವಾಳ ಸಮಾಜದವರಿಗೆ ರಾಜಕೀಯ ಪ್ರಾತಿನಿಧ್ಯತೆ ಸಿಗಬೇಕಿದೆ. ತಾಲ್ಲೂಕಿನಲ್ಲಿ ಅಲ್ಪ ಸಂಖ್ಯಾತ ಸಮುದಾಯವಾಗಿದ್ದರೂ ಸಹೋದರ ಸಮಾಜಗಳೊಂದಿಗೆ ಕಾಯಕದಲ್ಲಿ ವಿಶ್ವಾಸಗಳಿಸಿ, ಸಾಮರಸ್ಯ ಜೀವನ ಸಾಗಿಸುತ್ತಿದ್ದಾರೆ. ಸಮಾಜದಲ್ಲಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಕ್ಷಾತೀತವಾಗಿ ಒಗ್ಗಟ್ಟಾಗಿ ಹಿರಿಯರು ಸಮಾಜಕ್ಕೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕೆಪಿಸಿಸಿ ಎಸ್ ಟಿ ಘಟಕದ ಮಾಜಿ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ, 12 ನೇ ಶತಮಾನದ ಬಸವಣ್ಣನ ಆಶಯ ಸಾಕಾರಗೊಳಿಸಲು ಶೋಷಿತ ಸಮುದಾಯಗಳು ಜಾತ್ರೆ ಸಮಾರಂಭಗಳಿಗೆ ತಗಲುವ ಖರ್ಚಿನ ಒಂದು ಭಾಗವನ್ನು ಆಯಾ ಸಮುದಾಯಗಳ ಶ್ರೀಗಳ ಮಠಗಳ ಅಭಿವೃದ್ದಿಗೆ ಆರ್ಥಿಕ ಸಹಾಯದೊಂದಿಗೆ ಕೈಜೋಡಿಸಬೇಕು. ಪ್ರತಿಯೊಬ್ಬ ಕುಲಗುರುಗಳ ಜಯಂತಿಗಳನ್ನು ವೇದಿಕೆಯ ಮೂಲಕ ವಿಚಾರಧಾರೆಯನ್ನು ಯುವಕರಿಗೆ ತಿಳಿಸಬೇಕಿದೆ ಎಂದರು.

ಮಡಿವಾಳ ಸಮಾಜದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಮೇಶ್ ಮಾತನಾಡಿ, ಮಡಿವಾಳ ಸಮಾಜಕ್ಕೆ ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಅವರು ಪಟ್ಟಣದಲ್ಲಿ ಸಮುದಾಯ ಭವನಕ್ಕೆ ನಿವೇಶನ ಕಲ್ಪಿಸಿದ್ದಾರೆ. ಶಾಸಕ ಬಿ.ದೇವೇಂದ್ರಪ್ಪ ಅವರು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಒದಗಿಸುವ ಮೂಲಕ ಸಮಾಜದಿಂದ ಸಭೆ, ಸಮಾರಂಭಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಕಾಕನೂರು ನಾಗರಾಜ್ ಉಪನ್ಯಾಸ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ಮಾಚಿದೇವರ ಭಾವಚಿತ್ರದೊಂದಿಗೆ ಮಹಿಳೆಯರು ಕುಂಭ ಮೇಳದೊಂದಿಗೆ ಮೆರವಣಿಗೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಡಿವಾಳ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಬಿ.ಶಿವಕುಮಾರ್, ಗೌರವಾಧ್ಯಕ್ಷ ರೇವಣಸಿದ್ದಪ್ಪ, ಸಂಘಟನಾ ಕಾರ್ಯದರ್ಶಿ ಗೋಪಾಲಣ್ಣ, ಖಜಾಂಚಿ ಮಡಿಕಟ್ಟೆ ನಾಗರಾಜ್, ನಿರ್ದೇಶಕ ಕೆಂಚಪ್ಪ, ಮುಖಂಡರಾದ ಪರುಶರಾಮ್, ತುಂಬಿಗೆರೆ ರುದ್ರೇಶ್, ಗುಡದಯ್ಯ, ಶಂಭುಲಿಂಗಪ್ಪ, ರವಿಕುಮಾರ್, ಮಲ್ಲೇಶಪ್ಪ, ಕೆ.ಆರ್.ಶಿವಣ್ಣ, ಚಿಕ್ಕಮ್ಮನ ಹಟ್ಟಿನಾಗರಾಜ್, ಎಸ್.ಎಚ್.ನಾಗರಾಜ್, ಆನಂದಪ್ಪ, ಶಿಕ್ಷಕ ನಾಗೇಶ್, ರೇವಣ್ಣ, ಅಂಜಿನಪ್ಪ, ಹನುಮಂತಪ್ಪ ಸೇರಿದಂತೆ ಇದ್ದರು.

# ಟಿ-20; ಪಾಕ್ ಬಗ್ಗು ಬಡಿದ ಭಾರತ

(1ನೇ ಪುಟದಿಂದ)

ರನ್ ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಪಾಕಿಸ್ತಾನ 18 ಓವರ್ ಗಳಲ್ಲಿ 114 ರನ್ ಗಳಿಸುವಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಸೋಲಿಗೆ ಶರಣಾಯಿತು.

ಭಾರತದ ಪರ ಹಾರ್ದಿಕ್ ಪಾಂಡ್ಯ, ಜಸ್ಪ್ರೀತ್ ಬೂಮ್ರಾ, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ ತಲಾ 2 ವಿಕೆಟ್ ಪಡೆದರು. ಕುಲದೀಪ್ ಯಾದವ್ ಹಾಗೂ ತಿಲಕ್ ವರ್ಮಾ ತಲಾ ಒಂದು ವಿಕೆಟ್ ಪಡೆದರು. ಇನ್ನೂ ಭಾರತದ ಪರ ಆಕರ್ಷಕ 77 ರನ್ ಗಳಿಸಿ ತಂಡ ಗೆಲುವಿನಲ್ಲಿ ಪ್ರಮುಖ ಕೊಡುಗೆ ನೀಡಿದ ಇಶಾನ್ ಕಿಶಾನ್ ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಭಾಜನರಾದರು.

# ಯುಗಾದಿ ಹಬ್ಬದ ಪ್ರಯುಕ್ತ ಉಚಿತ ಕವನ ಸ್ಪರ್ಧೆಗೆ ಆಹ್ವಾನ


ದಾವಣಗೆರೆ : ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಪ್ರತೀ ವರ್ಷದಂತೆ ಈ ವರ್ಷವೂ ಯುಗಾದಿ ಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ ಉಚಿತ ಕವನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಕಲಾಕುಂಚದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಯಾವುದೇ ವಯೋಮಾನದ ಮಿತಿ ಇಲ್ಲದೇ ಯುಗಾದಿ ಬಗ್ಗೆ ಕವನ ರಚಿಸಿ ಈ ಕೆಳಗಿನ ವ್ಯಾಟ್ಸಪ್ ಸಂಖ್ಯೆಗೆ 15-3-2026 ರೊಳಗೆ ಕವನ ಕಳಿಸಬೇಕಾಗಿದೆ ಎಂದು ತೀರ್ಪುಗಾರರೊಲ್ಲಬ್ಬರಾದ ಶ್ರೀಮತಿ ಕೋಮಲಾ ವಸಂತಕುಮಾರ್ ಪ್ರಕಟಿಸಿದ್ದಾರೆ.

ಯಾವುದೇ ಸಭೆ, ಸಮಾರಂಭಗಳಿಲ್ಲದೇ ಸ್ಪರ್ಧೆಗಳಲ್ಲಿ ವಿಜೇತರಾದವರ ಅವರವರ ವ್ಯಾಟ್ಸಪ್ ಸಂಖ್ಯೆಗೆ ಫಲಿತಾಂಶ ಅಭಿನಂದನಾ ಪತ್ರ ಕಳಿಸಲಾಗುವುದು.

ಉಚಿತ ಕವನ ಸ್ಪರ್ಧೆಯಲ್ಲಿ ಭಾಗವಹಿಸಿದವರು ತಮ್ಮ ಕವನ ಪೂರ್ಣ ಪ್ರಮಾಣದ ಹೆಸರು ವಿಳಾಸ ವ್ಯಾಟ್ಸಪ್ ಸಂಖ್ಯೆಯನ್ನು 8884131815 ಈ ವ್ಯಾಟ್ಸಪ್ ಸಂಖ್ಯೆಗೆ ಕಳಿಸಬೇಕಾಗಿ ಕಲಾಕುಂಚ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಉಮೇಶ್ ವಿನಂತಿಸಿದ್ದಾರೆ.

# ಸೇವಾ ನಿಷ್ಠೆಗೆ ಗೌರವ ಸಿಗುತ್ತದೆ




ರಾಣೇಬೆನ್ನೂರು, ಫೆ.14: ವೃತ್ತಿಯಲ್ಲಿ ನಿಷ್ಠೆಯಿಂದ, ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದವರಿಗೆ ಯಾವತ್ತಿಗೂ ಗೌರವ ಸಿಗುತ್ತದೆ. ಎಂದು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಸ್. ಜಿ. ಮಾಕನೂರು ತಿಳಿಸಿದರು.

ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ 22 ವರ್ಷ ಸೇವೆ ಸಲ್ಲಿಸಿದ ಕಂಪ್ಯೂಟರ್ ಸೈನ್ಸ್ ವಿಭಾಗದ ಸಿಬ್ಬಂದಿ ಎಂ.ರಾಜೇಂದ್ರರವರಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಕರ್ತವ್ಯದಲ್ಲಿ ಪ್ರಾಮಾಣಿಕತೆ, ತಾವು ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಇದ್ದರೆ ಸಮಾಜ ಅವರನ್ನು ಅವರ ಕಾಯಕ ನಿಷ್ಠೆಯನ್ನು ಗುರುತಿಸುತ್ತದೆ ಎಂದರು.

ನಿವೃತ್ತ ನೌಕರರಾದ ಎಂ. ರಾಜೇಂದ್ರರವರು ಮಾತನಾಡಿ, ನಿಮ್ಮ ಎಲ್ಲರ ಪ್ರೀತಿ ನನ್ನನ್ನು ಮೂಕನನ್ನಾಗಿಸಿದೆ. ಬಹುಶಃ ಇದು ನನ್ನ ಪುಣ್ಯ ಎಂದು ಭಾವಿಸುತ್ತೇನೆ ಎಂದು ಭಾವುಕರಾಗಿ ಹೇಳಿದರು. ವಿವಿಧ ವಿಭಾಗದ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು ರಾಜೇಂದ್ರರವರ ಜೊತೆಗಿನ ಒಡನಾಟದ ತಮ್ಮ ನೆನಪುಗಳನ್ನು ಮೆಲುಕು ಹಾಕಿದರು.

ಡಾ.ಮುರುಗೇಶ್ ಜಂಬಗಿ ಸ್ವಾಗತಿಸಿದರು. ಪ್ರೊ. ಭಾವನಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಪುಷ್ಪ ತೆಂಬದ ವಂದಿಸಿದರು.

# ವಿಶ್ವ ವಿದ್ಯಾಲಯಕ್ಕೆ ಆಯ್ಕೆ



ರಾಣೇಬೆನ್ನೂರು, ಫೆ.11: ನಗರದ ಹಲಗೇರಿ ರಸ್ತೆಯಲ್ಲಿರುವ ಬಿ.ಎ.ಜೆ.ಎಸ್.ಎಸ್. ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ಕು.ಅರ್ಚನಾ ಕೊಣನತಲಿ ಹಾಗೂ ಕು. ಸಂಜನಾ ಕನ್ನಮ್ಮನವರ ಇವರು 2025-26 ರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಅಂತರ್ ಮಹಾವಿದ್ಯಾಲಯಗಳ ಬಾಲ್ ಬ್ಯಾಡ್ಮಿಂಟನ್‌ನ ಪಂದ್ಯಾವಳಿಯಲ್ಲಿ ಭಾಗವಹಿಸಿ ಯೂನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ.

ಇವರು ತಮಿಳುನಾಡಿನ ಅಣ್ಣಾ ಯೂನಿವರ್ಸಿಟಿಯಲ್ಲಿ ನಡೆಯುವ ದಕ್ಷಿಣವಲಯದ ಅಂತರ್ ವಿಶ್ವವಿದ್ಯಾಲಯಗಳ ಬಾಲ್ ಬ್ಯಾಡ್ಮಿಂಟನ್‌ನ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಇವರಿಗೆ ಕ್ರೀಡಾ ವಿಭಾಗದ ಸಂಚಾಲಕರಾದ ಡಾ. ಸುನೀಲ ಹಿರೇಮನಿ ತರಬೇತಿ ನೀಡಿದ್ದರು.

## ರಾಣೇಬೆನ್ನೂರು: ಬಸವರಾಜ್‌ಗೆ ಪಿ.ಹೆಚ್.ಡಿ.



ರಾಣೇಬೆನ್ನೂರು, ಫೆ11: ನಗರದ ಬಿ.ಎ.ಜೆ. ಎಸ್.ಎಸ್. ಮಹಿಳಾ ಮಹಾವಿದ್ಯಾಲಯದ ಶಿಕ್ಷಣಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಬಸವರಾಜ ಮಾಳೇನಹಳ್ಳಿ ಇವರು ದಾವಣಗೆರೆ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದು-ಕೊಂಡಿದ್ದಾರೆ. ಶಿಕ್ಷಣಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಂಗಸ್ವಾಮಿ.ಸಿ ಮಾರ್ಗದರ್ಶನ ಮಾಡಿದಲ್ಲಿ ಸ್ನಾತಕೋತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಇವರು ಮಂಡಿಸಿದ "ಸಾಮಾನ್ಯ ಹಂತದ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಹಾಗೂ ಔದ್ಯೋಗಿಕ ಆಕಾಂಕ್ಷೆಯ ಮೇಲೆ ಸಾಮಾಜಿಕ - ಭಾವನಾತ್ಮಕ ಪರಿಪಕ್ವತೆ, ಕೌಂಟುಂಬಿಕ ಪರಿಸರ ಹಾಗೂ ಸಮಯ ನಿರ್ವಹಣೆಯ ಪಾತ್ರದ ಕುರಿತು ಅಧ್ಯಯನ"ಎಂಬ ಮಹಾ ಪ್ರಬಂಧವನ್ನು ಮಂಡಿಸಿದ್ದರು.

# ಬೇತೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ರೇಣುಕಮ್ಮ

ದಾ.ನಗರವಾಣಿ ಸುದ್ದಿ

ದಾವಣಗೆರೆ.ಫೆ.12: ತಾಲ್ಲೂಕಿನ ಬೇತೂರು ಗ್ರಾಮ ಪಂಚಾಯಿತಿಯ ಎರಡನೆ ಅವಧಿಯ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 5 ನೇ ವಾರ್ಡಿನ ಬಿ ಚಿತ್ತಾನಹಳ್ಳಿ ಗ್ರಾಮದ ಶ್ರೀಮತಿ ರೇಣುಕಮ್ಮ ತಿಮ್ಮಣ್ಣ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಚುನಾವಣೆ ಅಧಿಕಾರಿಗಳಾಗಿ ದಾವಣಗೆರೆ ಜಿಲ್ಲಾ ಪಂಚಾಯತಿ ಸಹಾಯಕ ನಿರ್ದೇಶಕ ಹೆಚ್.ಬಸವರಾಜಪ್ಪ ಕಾರ್ಯನಿರ್ವಹಿಸಿದರು. ಸಭೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರು ಭಾಗವಹಿಸಿದ್ದರು.

# ಕೃಷಿ ಕೂಲಿ ಕಾರ್ಮಿಕರ ಸಂಘಟನೆ ಜಿಲ್ಲಾಧ್ಯಕ್ಷರಾಗಿ ಆವರಗೆರೆ ಚಂದ್ರು ಆಯ್ಕೆ

ದಾವಣಗೆರೆ: ಕೃಷಿ ಕೂಲಿ ಕಾರ್ಮಿಕರ ಸಂಘಟನೆ (ಬಿಕೆಎಂಯು) ಜಿಲ್ಲಾಧ್ಯಕ್ಷರಾಗಿ ಕಾಂ ಆವರಗೆರೆ ಚಂದ್ರು ಆಯ್ಕೆಯಾಗಿದ್ದಾರೆ.

ಇಲ್ಲಿನ ಅಶೋಕ ರಸ್ತೆಯ ಪಂಪಾಪತಿ ಭವನದಲ್ಲಿ ಇಂದು ಸೇರಿದ್ದ ದಾವಣಗೆರೆ ಜಿಲ್ಲಾ ಕೃಷಿ ಕೂಲಿ ಕಾರ್ಮಿಕರ ಸಭೆಯಲ್ಲಿ ಪದಾಧಿಕಾರಿಗಳನ್ನು ಈ ಮುಂದಿನಂತೆ ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ನರೇಗಾ ರಂಗನಾಥ್, ಖಜಾಂಚಿಯಾಗಿ ಬೊಮ್ಮಕ್ಕ ಜಗಲೂರು, ಸಂಘಟನಾ ಕಾರ್ಯದರ್ಶಿಯಾಗಿ ಎ ತಿಪ್ಪೇಶ್. ಉಪಾಧ್ಯಕ್ಷರುಗಳಾಗಿ ನಾಗನೂರು ಅಂಜನಪ್ಪ, ಸಂಕ್ಲಿಪುರ ಶಿವಪ್ಪ, ಪಲ್ಲಾಗಟ್ಟೆ ನಾಗರಾಜ, ಹದಡಿ ಹನುಮಂತಮ್ಮ. ಕಾರ್ಯದರ್ಶಿಗಳಾಗಿ ಕೆ ಜಿ ನಿಂಗಪ್ಪ, ಎಂ ಆರ್ ಗಂಗಾಧರ, ತುಪ್ಪದಹಳ್ಳಿ ಸುಭಾಷ್. ಸಂಚಾಲಕರುಗಳಾಗಿ ಹದಡಿ ನಾಗರಾಜ್ ಮತ್ತು ಯೋಗೇಶಪ್ಪ. ಸಮಿತಿ ಸದಸ್ಯರುಗಳಾಗಿ ಗಡಗಂಗಳ ರೇಣುಕಮ್ಮ, ಮೇಕೆ ಮಂಜಕ್ಕ, ಗೇಟಿನರ ರೇಣುಕಮ್ಮ, ಸುಶೀಲಮ್ಮ ಪಿಬಿ ಬಡಾವಣೆ ಮಂಜಕ್ಕ, ಲೀಲಾವತಿ, ಮಂಜುನಾಥ, ಬಸವರಾಜ ಇತರರು ಆಯ್ಕೆಯಾಗಿದ್ದಾರೆ.

# ಹಳೆ ದಾವಣಗೆರೆಯಲ್ಲಿ ಜಾತ್ರೆ ಸಿದ್ಧತೆ ಆಯುಕ್ತರು ಸುಳ್ಳು ಹೇಳುತ್ತಿದ್ದಾರೆ

ದಾ.ನಗರವಾಣಿ ಸುದ್ದಿ

ದಾವಣಗೆರೆ.ಫೆ.14: ದುರ್ಗಾಂಬಿಕಾ ದೇವಿ ಜಾತ್ರೆ ಅಂಗವಾಗಿ ಹಳೆ ದಾವಣಗೆರೆ ಭಾಗದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಸಿದ್ಧತೆಗಳು ಚುರುಕಿನಿಂದ ಸಾಗಿವೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ಸ್ಪಷ್ಟಪಡಿಸಿರುವುದು ಬರೀ ಪತ್ರಿಕಾ ಹೇಳಿಕೆಗೆ ಸೀಮಿತವಾಗಿದ್ದು, ವಾಸ್ತವದಲ್ಲಿ ಹಳೆ ಭಾಗದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ ಎಂದು ನಗರಸಭೆ ಮಾಜಿ ಅಧ್ಯಕ್ಷ ಬಿ.ವೀರಣ್ಣ, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿದ್ಧತೆಗಳು ಚುರುಕಿನಿಂದ ಸಾಗಿವೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ಸ್ಪಷ್ಟಪಡಿಸಿರುವುದು ಶುದ್ಧ ಸುಳ್ಳು ಹೇಳಿಕೆಯಾಗಿದೆ. ಜಾತ್ರೆಗೆ ಇನ್ನು ಕೆಲವೇ ದಿನಗಳು ಬಾಕಿ ಇದ್ದರೂ ಹಳೆ ಭಾಗದ ವೃತ್ತಗಳು, ದೇವಸ್ಥಾನಗಳಿಗೆ ಸುಣ್ಣ, ಬಣ್ಣ ಬಳಿಯದೇ ಇರುವುದು ನೋಡಿದರೆ ಹಳೆ ದಾವಣಗೆರೆ ಭಾಗಕ್ಕೆ ಮಲತಾಯಿ ಧೋರಣೆ ಅಲ್ಲದೇ ಮತ್ತಿನ್ನೇನು ಎಂದು ಪ್ರಶ್ನಿಸಿದ್ದಾರೆ. ಇನ್ನೆರಡು ದಿನಗಳಲ್ಲಿ ಹಳೆ ಭಾಗದ ವೃತ್ತಗಳು, ದೇವಸ್ಥಾನಗಳಿಗೆ ಸುಣ್ಣ, ಬಣ್ಣ ಮೂಲಭೂತ ಸೌಕರ್ಯ ನೀಡದಿದ್ದರೆ ಪಾಲಿಕೆ ಮತ್ತು ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಆಯುಕ್ತರು ಸ್ಪಷ್ಟನೆ ನೀಡುವುದನ್ನು ಬಿಟ್ಟು ನಗರದ ವಿವಿಧ ದೇವಸ್ಥಾನಗಳಿಗೆ ಸುಣ್ಣ-ಬಣ್ಣ ಬಳಿಯುವುದು, ಸಮರ್ಪಕ ನೀರಿನ ವ್ಯವಸ್ಥೆ ಕಲ್ಪಿಸುವುದು ಹಾಗೂ ದಾರಿದೀಪ ಸೇರಿದಂತೆ ಬೆಳಕಿನ ವ್ಯವಸ್ಥೆ ಮಾಡುವ ಕೆಲಸಕ್ಕೆ ಮುಂದಾಗಬೇಕು. ಕಾಮಗಾರಿಗಳಿಗೆ ಮಹಾನಗರ ಪಾಲಿಕೆಯಿಂದ ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದು ಹೇಳಿದ್ದಾರೆ. ಟೆಂಡರ್ ಆಗಿ ಕೆಲಸ ಮಾಡುವಷ್ಟರಲ್ಲಿ ಜಾತ್ರೆ ಮುಗಿಯುತ್ತದೆ ಟೆಂಡರ್ ಆಗಿದ್ದರೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಿ ಜಾತ್ರೆಗೆ ಸಂಬಂಧಿಸಿದಂತೆ ಕಾಮಗಾರಿಗಳು ಈ ವಾರದಲ್ಲೇ ಮುಗಿಸಬೇಕೆಂದು ಆಗ್ರಹಿಸಿದ್ದಾರೆ.

ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದೆ ಅಧಿಕಾರಿಗಳು ತಾವು ಮಾಡಿದ್ದೆ ಸರಿ ಎಂಬಂತಾಗಿದೆ. ಜಾತ್ರೆಯ ಹಿನ್ನೆಲೆಯಲ್ಲಿ ನಗರಕ್ಕೆ ಲಕ್ಷಾಂತರ ಭಕ್ತಾದಿಗಳು ಆಗಮಿಸುತ್ತಾರೆ. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪಾಲಿಕೆ ಆಡಳಿತವು ಆದ್ಯತೆ ನೀಡಬೇಕು. ಇಲ್ಲವಾದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗಲಿವೆ ಎಂದು ಮಾಜಿ ದೂಡಾ ಅಧ್ಯಕ್ಷ ಮಾಲತೇಶರಾವ್ ಜಾಧವ್, ಕರಿಗಾರ ಬಸಪ್ಪ, ಮಹಾನಗರ ಪಾಲಿಕೆ ಮಾಜಿ ಸದಸ್ಯರುಗಳಾದ ರಾಕೇಶ್ ಜಾಧವ್, ಲಕ್ಷ್ಮೀದೇವಿ ವೀರಣ್ಣ, ಮಾಜಿ ಮಹಾಪೌರರಾದ ವಿನಾಯಕ ಪೈಲ್ವಾನ್, ಎಸ್. ಬಸಪ್ಪ, ಹೆಚ್. ಎನ್. ಚಂದ್ರಪ್ಪ, ಮನೋಹರ್ ಪೈಲ್ವಾನ್ ಸೇರಿದಂತೆ ಹಳೆಯ ಭಾಗದ ಮುಖಂಡರು ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

# ಜೈನ್ ವಿದ್ಯಾಲಯದಲ್ಲಿ ಪೋಷಕರ ಕ್ರೀಡಾಕೂಟ




ದಾವಣಗೆರೆ: ನಗರದ ಜೈನ್ ವಿದ್ಯಾಲಯದ ಸ್ಟೇಟ್ ಹಾಗೂ ಸಿಬಿಎಸ್‌ಇ ವಿಭಾಗಗಳ ವತಿಯಿಂದ ಸಿಬಿಎಸ್‌ಇ ಆವರಣದಲ್ಲಿ ಪೋಷಕರಿಗಾಗಿ ಕ್ರೀಡಾಕೂಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಪೋಷಕರು ಉತ್ಸಾಹದಿಂದ ಭಾಗವಹಿಸಿ ಕ್ರೀಡಾಸ್ಫೂರ್ತಿಯನ್ನು ಪ್ರದರ್ಶಿಸಿದರು. ಶಾಲಾ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ಸಹಕಾರದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪದಕಗಳನ್ನು ನೀಡಿ ಸನ್ಮಾನಿಸಲಾಯಿತು.

# ಎಚ್.ಎಫ್ ಅಕ್ಕಿ ಅವರಿಗೆ ಪರಿಸರ ರಕ್ಷಣೆ ಸೇವಾ ಪ್ರಶಸ್ತಿ



ದಾ ನಗರವಾಣಿ ಸುದ್ದಿ

ರಾಣೆಬೆನ್ನೂರು, ಫೆ.10: ಇಲ್ಲಿನ ನೀಡ್ಸ್ ಸೇವಾ ಸಂಸ್ಥೆಯ, ಕಾರ್ಯನಿರ್ವಾಹಕ ಅಧಿಕಾರಿ, ಎಚ್. ಎಫ್. ಅಕ್ಕಿ ಅವರು ಪರಿಸರ ಕ್ಷೇತ್ರದಲ್ಲಿ ಸಲ್ಲಿದ ಸೇವೆ ಗುರುತಿಸಿ ಜಿಲ್ಲಾಡಳಿತವು ಪರಿಸರ ರಕ್ಷಣೆ ಸೇವಾ ಪ್ರಶಸ್ತಿ ನೀಡಿ ಗೌರವಿಸಿದೆ.

ನೀಡ್ಸ್ ಸಂಸ್ಥೆಯ ಮೂಲಕ ಕಳೆದ 40 ವರ್ಷಗಳಿಂದ ಸಾಮಾಜಿಕ, ಪರಿಸರ, ಸುಜಲಾನ್, ಸುಸ್ಥಿರ ಅಭಿವೃದ್ಧಿ ಸೇರಿದಂತೆ ಮತ್ತಿತರ ಕ್ಷೇತ್ರಗಳ ಯೋಜನೆಗಳ ಮೂಲಕ ತಮ್ಮನ್ನೇ ತಾವು ಗುರುತಿಸಿಕೊಂಡಿರುವ, ಹೊಳಿಯಪ್ಪ ಫಕ್ಕಿರಪ್ಪ ಅಕ್ಕಿ ಅವರು, ಮೂಲತ: ಸವಣೂರು ತಾಲೂಕಿನ ಕುಣಿಮೆಳ್ಳಿಹಳ್ಳಿ ಗ್ರಾಮದವರು.

ಸದಾಕಾಲ ಒಂದಿಲ್ಲ ಒಂದು ರೀತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ, ಅವರು ಫೇವಾರ್ಡ್ ಕೆ ಜಿಲ್ಲಾ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ರಾಜ್ಯ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಶಸ್ತಿ ಪುರಸ್ಕೃತ ಅಕ್ಕಿ ಅವರಿಗೆ ಜಿಲ್ಲಾಡಳಿತವು ಇತ್ತೀಚಿಗೆ ಆಯೋಜಿಸಿದ್ದ 77 ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು.

### ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ ಆರೋಪ

# ಕಾರ್ಮಿಕರ 'ಸುರಕ್ಷತಾ ಕಿಟ್' ಖರೀದಿಯಲ್ಲಿ ಭಾರೀ ಅಕ್ರಮ

ದಾವಣಗೆರೆ: ರಾಜ್ಯ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಿತರಿಸಲಾಗುವ 'ಸುರಕ್ಷತಾ ಕಿಟ್' ಖರೀದಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕುಮಾರ್ ಆರೋಪಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರವು ಒಂದು ಸುರಕ್ಷತಾ ಕಿಟ್‌ಗೆ 4,492.27 ರೂ. ಗಳನ್ನು ನಿಗದಿಪಡಿಸಿದೆ. ಆದರೆ, ಕಾರ್ಮಿಕರು ಮಾರುಕಟ್ಟೆಯಲ್ಲಿ ವಿಚಾರಿಸಿದಾಗ ಅದೇ ಕಿಟ್ ಕೇವಲ 1,245 ರೂ. ಗಳಿಗೆ ಲಭ್ಯವಿರುವುದು ಪತ್ತೆಯಾಗಿದೆ. ಪ್ರತಿ ಕಿಟ್ ಮೇಲೆ ಸುಮಾರು 3,247 ರೂ. ಗಳಷ್ಟು ಹಣ ಲೂಟಿಯಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಸುಮಾರು 3 ಲಕ್ಷಕ್ಕೂ ಅಧಿಕ ಕಿಟ್‌ಗಳನ್ನು ಹಂಚಲಾಗಿದ್ದು, ಒಟ್ಟಾರೆ 90 ಕೋಟಿರೂಗೂ ಅಧಿಕ ಸಾರ್ವಜನಿಕ ಹಣ ದುರ್ಬಳಕೆಯಾಗಿದೆ. ಟೆಂಡರ್ ಪಡೆದ ಸಂಸ್ಥೆ. ಸುರಕ್ಷತಾ ಕಿಟ್ ಪೂರೈಸುವ ಜವಾಬ್ದಾರಿಯನ್ನು ಸಿಂಪೋನಿ ಕಂಪ್ಯೂಟರ್ ಸಿಸ್ಟಮ್ ಲಿಮಿಟೆಡ್ ಎಂಬ ಕಂಪ್ಯೂಟರ್ ಸೇವಾ ಸಂಸ್ಥೆಗೆ ನೀಡಲಾಗಿದೆ. "ಸಾಫ್ಟ್‌ವೇರ್ ಮತ್ತು ಕಂಪ್ಯೂಟರ್ ವ್ಯವಹಾರ ಮಾಡುವ ಸಂಸ್ಥೆಗೆ ಕಾರ್ಮಿಕರ ಹೆಲ್ಮೆಟ್, ಬೂಟುಗಳ ಪೂರೈಕೆಗೆ ಗುತ್ತಿಗೆ ನೀಡಿದ್ದು ಹೇಗೆ?" ಎಂದು ಅವರು ಪ್ರಶ್ನಿಸಿದರು.

ಈ ಸರ್ಕಾರ ಬಂದ ಮೇಲೆ ಕಾರ್ಮಿಕರ ಮಕ್ಕಳ ಭವಿಷ್ಯಕ್ಕೂ ಕೊಡಲಿ ಪೆಟ್ಟು ಬಿದ್ದಿದೆ. ಸಚಿವ ಸಂತೋಷ್ ಲಾಡ್ ಅವರ ಅವಧಿಯಲ್ಲಿ ಶೈಕ್ಷಣಿಕ ಧನಸಹಾಯವನ್ನು ಭಾರಿ ಪ್ರಮಾಣದಲ್ಲಿ ಇಳಿಕೆ ಮಾಡಲಾಗಿದೆ.: ಈ ಮೊದಲು ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ 60,000 ರೂ. ಸ್ಕಾಲರ್‌ಶಿಪ್ ಅನ್ನು ಕೇವಲ 12000 ರೂ. ಗೆ ಇಳಿಸಲಾಗಿದೆ. ಇತರ ತರಗತಿಗಳ ಧನಸಹಾಯದಲ್ಲೂ ಶೇ. 75 ರಷ್ಟು ಕಡಿತವಾಗಿದ್ದು, ಬಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಸಂಚಕಾರ ಬಂದಿದೆ ಎಂದರು.

ಒಂದೆಡೆ ಸ್ಕಾಲರ್‌ಶಿಪ್ ಹಣ ಕಡಿತಗೊಳಿಸಿರುವ ಸರ್ಕಾರ, ಮತ್ತೊಂದೆಡೆ ಸುಮಾರು 1,225 ಕೋಟಿ ರೂ. ವೆಚ್ಚದಲ್ಲಿ 31 ಜಿಲ್ಲೆಗಳಲ್ಲಿ ಹೊಸದಾಗಿ 'ಶ್ರಮಿಕ' ವಸತಿ ಶಾಲೆಗಳನ್ನು ನಿರ್ಮಿಸಲು ಮುಂದಾಗಿದೆ. "ಹಳೆಯ ಸರ್ಕಾರಿ ಶಾಲೆಗಳನ್ನೇ ಸರಿಪಡಿಸಲು ಸಾಧ್ಯವಾಗದ ಸರ್ಕಾರ, ಹೊಸ ಕಟ್ಟಡಗಳನ್ನು ನಿರ್ಮಿಸುತ್ತಿರುವುದು ಕೇವಲ ಕಮಿಷನ್ ದಂಧೆಗಾಗಿ" ಎಂದು ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬೃಹತ್ ಹಗರಣದ ಬಗ್ಗೆ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಲು ನಿರ್ಧರಿಸಲಾಗಿದ್ದು, ಅದಕ್ಕಿಂತಲೂ ಮುಂಚೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ರಾಜಪ್ಪ, ಭರತ್, ಪ್ರಸನ್ನ ಇತರರು ಉಪಸ್ಥಿತರಿದ್ದರು.

## ಮಾಜಿ ಸೈನಿಕರಿಗೆ ಬೆಂಗಳೂರಿನಲ್ಲಿ ಉದ್ಯೋಗ ಮೇಳ

ದಾವಣಗೆರೆ,ಫೆ.11 : ಡಿಜಿಆರ್ (ಡೈರೆಕ್ಟೋರೇಟ್ ಜನರಲ್ ರಿಸೆಟ್ಮೆಂಟ್) ಇವರ ಪ್ರಾಯೋಜಕತ್ವದಲ್ಲಿ ಮಾಜಿ ಸೈನಿಕರಿಗಾಗಿ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಅಂಡ್ ಸೆಂಟರ್, ಬೆಂಗಳೂರು ಇಲ್ಲಿ ಫೆಬ್ರವರಿ 27 ರಂದು ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ಮಾಜಿ ಸೈನಿಕರು, ಮಾಜಿ ಸೈನಿಕ ಗುರುತಿನ ಚೀಟಿ ಮತ್ತು ಬಯೋಡೇಟದ 5 ಪ್ರತಿಗಳೊಂದಿಗೆ ನೇರವಾಗಿ ಭಾಗವಹಿಸಬಹುದು ಹಾಗೂ ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 020–26341217 ಅಥವಾ 011–20863432 ಮತ್ತು drzspne@desw.gov.in ಅಥವಾ seopadgr@desw.gov.in ಅನ್ನು ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ
9740137083

### ದಿನಕ್ಕೊಂದು ಚುಟುಕು

ಭಕ್ತಿಯಿರಲಿ ಮುಕ್ತಿಯಾದಿಗಿದುವೆ ಮಾರ್ಗ
ಮೌಲ್ಯಗಳಿರಲಿ ಮನದಾನಂದಕ್ಕಿದುವೆ ಮಾರ್ಗ
ಕರ್ಮವಿರಲಿ ಭವಿಷ್ಯದೇಳಿಗೆಗಿದುವೆ ಮಾರ್ಗ
ನಂಬಿಕೆಗಳಿರಲಿ ನೆಮ್ಮದಿಯಾನಂದಕ್ಕಿದುವೆ ಮಾರ್ಗ

– ಡಾ. ಮಮು

### ದಿನಕ್ಕೊಂದು ನುಡಿ ಮುತ್ತು

ಮುಲಾಜಿಲ್ಲದೇ ಮಾಡುವ
ತಪ್ಪುಗಳ ಗಾತ್ರ ದೊಡ್ಡದಾದಂತೆಲ್ಲಾ
ಪಾಪಗಳ ಗಂಟಿನ ಭಾರವೂ
ಹೆಚ್ಚಾಗುತ್ತಾ ಸಾಗುತ್ತದೆ,
ಅದನ್ನು ಅನುಭವಿಸುವ ದಿನಗಳಲ್ಲಿ,
ಮಾಡಿದ ಪಾಪಗಳು
ಮನಃಪಟಲದಲ್ಲಿ ಮೂಡಿ
ಪಶ್ಚಾತ್ತಾಪದ ಕಣ್ಣೀರು
ಹೊರಚೆಲ್ಲಿದಾಗ ಕಾಲ ಮಿಂಚಿರುತ್ತದೆ!

– ಮಂಜುಳಾ ಪ್ರಸಾದ್ ದಾವಣಗೆರೆ



ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186

# ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟ



ದಾವಣಗೆರೆ,ಫೆ.15 : ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ವಿಶೇಷ ಪರಿಷ್ಕರಣೆ ನಂತರ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ, ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿಗಳು ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಎಲ್ಲಾ ಮತಗಟ್ಟೆಗಳಲ್ಲಿ ಫೆಬ್ರವರಿ 14 ರಂದು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಭೆ ನಡೆಸಿ ಮತದಾರರ ಪರಿಷ್ಕರಣೆ ಹಾಗೂ ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಕುರಿತಂತೆ ಮಾಹಿತಿ ನೀಡಿ ಪ್ರಕಟಿಸಿದರು.

ಮತದಾರರ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ https://ceo.karnataka.gov.in/en ಹಾಗೂ ಪಟ್ಟಿಯನ್ನು ಮತ್ತು ಜಿಲ್ಲಾಧಿಕಾರಿಗಳ ವೆಬ್‌ಸೈಟ್‌ಗಳಲ್ಲಿ ಮತದಾರರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಸಾರ್ವಜನಿಕರು ತಮ್ಮ ಹೆಸರುಗಳನ್ನು ಸರಿಯಾದ ಮಾಹಿತಿಯೊಂದಿಗೆ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆಯೇ ಎಂದು ಪರಿಶೀಲಿಸಿಕೊಳ್ಳಬಹುದು.

107–ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ, 1,14,165 ಪುರುಷ, 1,18,355 ಮಹಿಳೆಯರು ಹಾಗೂ 44 ತೃತೀಯಲಿಂಗ ಮತದಾರರು ಸೇರಿದಂತೆ ಒಟ್ಟು 2,32,564 ಮತದಾರರಿದ್ದಾರೆ, ಇದರಲ್ಲಿ 2204 ಯುವ ಮತದಾರರು (18–19 ವರ್ಷದವರು), 1 ವಿದೇಶಿ ಮತದಾರರು, 2542 ವಿಕಲಚೇತನ ಮತದಾರರು ಮತ್ತು 85 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟವರು 2157 ಮತದಾರಿದ್ದಾರೆ, ಒಟ್ಟು 217 ಮತಗಟ್ಟೆ ಗಳಿದ್ದು ಹೊಸದಾಗಿ 67 ಮತಗಟ್ಟೆ ಗಳನ್ನು ಸೇರ್ಪಡೆಗೊಳಿಸಿದ್ದು 24 ಮತಗಟ್ಟೆ ಗಳನ್ನು ಬದಲಾವಣೆ ಮಾಡಲಾಗಿ ಒಟ್ಟು ಈಗ 284 ಮತಗಟ್ಟೆಗಳಿವೆ ಎಂದು ತಿಳಿಸಿದರು.

ಅರ್ಹ ಮತದಾರರು ಅರ್ಜಿಗಳನ್ನು ಸಲ್ಲಿಸಲು ತಮ್ಮ ಮೊಬೈಲ್ ಫೋನ್ನಲ್ಲಿ ಮತದಾರರ ಸಹಾಯವಾಣಿ ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಬಹುದು. ಅಥವಾ https://voters.eci.gov.in/portal ನಲ್ಲಿಯೂ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿಗಳನ್ನು ನಿಗದಿತ ನಮೂನೆಗಳಲ್ಲಿ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೊಂದಣಾಧಿಕಾರಿಗಳಿಗೆ ಹೊಸ ಮತದಾರರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ನಮೂನೆ 6 ಅರ್ಜಿ, ವಿದೇಶಿ ಭಾರತೀಯ ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲು ನಮೂನೆ 6ಎ ಅರ್ಜಿ, ಅಸ್ತಿತ್ವದಲ್ಲಿರುವ ಮತದಾರರ ಪಟ್ಟಿಯಲ್ಲಿ ಸೇರ್ಪಡೆ/ಹೆಸರು ತೆಗೆದುಹಾಕಲು ಆಕ್ಷೇಪಣೆ ಸಲ್ಲಿಸಲು ನಮೂನೆ 7 ನಮೂನೆ, ನಿವಾಸ ಬದಲಾವಣೆ/ ಅಸ್ತಿತ್ವದಲ್ಲಿರುವ ಮತದಾರರ ಪಟ್ಟಿಯಲ್ಲಿ ನಮೂದುಗಳ ತಿದ್ದುಪಡಿ/ಎಪಿಕ್ ಬದಲಾವಣೆ/ ಭಾವಚಿತ್ರ ಬದಲಾವಣೆ ಇತರೆ ತಿದ್ದುಪಡಿಗೆ ನಮೂನೆ 8 ರಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು.

ಮತದಾರರ ಫೋಟೋ ಗುರುತಿನ ಚೀಟಿಗಳು ಮತ್ತು ಅರ್ಜಿಗಳ ಸಲ್ಲಿಕೆಗೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿ ಜಿಲ್ಲಾ ಚುನಾವಣಾಧಿಕಾರಿ, ಮತದಾರರ ನೊಂದಣಾಧಿಕಾರಿ, ಸಹಾಯಕ ಮತದಾರರ ನೊಂದಣಾಧಿಕಾರಿ ಮತ್ತು ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದು, ಎಲ್ಲಾ ರಾಜಕೀಯ ಪಕ್ಷದವರು ಮತಗಟ್ಟೆ ಮಟ್ಟದ ಏಜೆಂಟರ್‌ಗಳನ್ನು ನೇಮಕ ಮಾಡಿ, ನೇಮಕ ಮಾಡಿದ ಪ್ರತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವುದು. ರಾಜಕೀಯ ಪಕ್ಷಗಳು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ರೀತಿಯಲ್ಲಿ ಪಾಲ್ಗೊಂಡು ಮತದಾರರ ನೋಂದಣಿ ಮಾಡಿಸುವ ನಿಟ್ಟಿನಲ್ಲಿ ಹಾಗೂ ದೋಷರಹಿತ ಮತದಾರರ ಪಟ್ಟಿ ತಯಾರಿಸಲು ಸಹಕರಿಸುವಂತೆ ತಿಳಿಸಿದರು.

ಈ ವೇಳೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳು ಉಪಸ್ಥಿತರಿದ್ದರು.

# ಷೇರು ಮಾರುಕಟ್ಟೆ ವಂಚನೆ 93 ಲಕ್ಷ ಕಳಕೊಂಡ ಮಹಿಳೆ

ದಾವಣಗೆರೆ: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ರೆ ಹೆಚ್ಚು ಲಾಭ ಗಳಿಸಬಹುದು ಎಂಬ ಆಸೆ ತೋರಿಸಿ ನಗರದ ಮಹಿಳಾ ಟೆಕ್ಕಿಗೆ 93 ಲಕ್ಷ ರೂ. ವಂಚನೆ ಮಾಡಿರುವ ಪ್ರಕರಣ ದಾವಣಗೆರೆಯಲ್ಲಿ ನಡೆದಿದೆ.

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 38 ವರ್ಷದ ಟೆಕ್ಕಿಗೆ ಲಾಭದ ಆಸೆ ತೋರಿಸಿ ವಂಚಿಸಲಾಗಿದೆ. ವಿಐಪಿ ರುದ್ರಾ ಷೇರ್ಸ್ ಎಂದು ವಾಟ್ಸಾಪ್ ಗ್ರೂಪ್‌ನಲ್ಲಿ ಬಂದಿದ್ದ ಸಂದೇಶವನ್ನು ನಂಬಿ ಮಹಿಳೆ ಹಣ ಹೂಡಿಕೆ ಮಾಡಿದ್ದರು. ಹೆಚ್ಚಿನ ಲಾಭ ಪಡೆಯುವ ಆಸೆಯಿಂದ ಹಂತ ಹಂತವಾಗಿ 93 ಲಕ್ಷ ರೂ. ಹೂಡಿಕೆ ಮಾಡಿದ್ದರು.

ಲಾಭಾಂಶ ಇರಲಿ ಹೂಡಿಕೆ ಮಾಡಿದ ಹಣ ಕೂಡ ವಾಪಸ್ ಬಾರದೇ ಇದ್ದಾಗ ಮಹಿಳೆಗೆ ವಂಚನೆಗೆ ಒಳಗಾಗಿದ್ದು ಅರಿವಾಗಿದೆ. ಈ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಿವರಾತ್ರಿ ಆಚರಣೆ; ಎಲ್ಲೆಡೆ ಶಿವನಾಮ...

(1ನೇ ಪುಟದಿಂದ)

ಶ್ರೀ ಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಅಜ್ಜಂಪುರ ಶೆಟ್ರು ಮಂಜುನಾಥ್ ಶಿವಸ್ಮರಣೆ ನೃತ್ಯ ಜಾಗರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ದಾವಣಗೆರೆಯ ಜನರು ಮಹಾಶಿವರಾತ್ರಿಯಂದು ಮುಂಜಾನೆಯಿಂದ ಮಧ್ಯಾಹ್ನದವರೆಗೆ ತಮ್ಮ ಪೂಜೆಯನ್ನು ನೆರವೇರಿಸಿದ್ದು ಗಮನ ಸೆಳೆದಿದೆ. ಇನ್ನು ಕೆಲವರು ತಮ್ಮ ಮನೆಗಳಲ್ಲಿಯೇ ಶಿವಾಭಿಷೇಕ ಮಾಡಿದರು. ಶಿವರಾತ್ರಿ ಪ್ರಮುಖ ಹಬ್ಬವಾಗಿದ್ದು, ಈ ದಿನ ಕೆಲವರು ಉಪವಾಸ ವ್ರತವನ್ನು ಕೂಡ ಮಾಡುತ್ತಾರೆ. ಹಾಗೂ ಇನ್ನು ಕೆಲವರು ಹಣ್ಣು –ಹಾಲು ಮಾತ್ರ ಸೇವಿಸುತ್ತಾರೆ. ಜೊತೆಗೆ ವಿವಿಧ ಧಾರ್ಮಿಕ ಚಟುವಟಿಕೆಗಳನ್ನು ಮಾಡಿದ್ದಾರೆ. ಶಿವನನ್ನು ಪೂಜಿಸುವುದು ಮತ್ತು ಕಠಿಣ ಉಪವಾಸವನ್ನು ಆಚರಿಸುವುದು ಸೇರಿದಂತೆ, ಒಬ್ಬ ವ್ಯಕ್ತಿಯು ಶಿವರಾತ್ರಿಯ ದಿನದಂದು ಭಗವಾನ್ ಶಂಕರನನ್ನು ಸಂತೋಷಪಡಿಸಿದರೆ ಮೋಕ್ಷ ಅಥವಾ ಮೋಕ್ಷದಿಂದ ಆಶೀರ್ವದಿಸಲ್ಪಡುತ್ತಾನೆ ಎನ್ನುವ ಪ್ರತೀತಿ ಇದೆ.

ವ್ಯಾಪಾರಿಗಳ ಮುಖದಲ್ಲಿ ಸಂತಸ: ಒಂದೆಡೆ ಶಿವರಾತ್ರಿ ಹಬ್ಬ, ಮತ್ತೊಂದೆಡೆ ಬೇಸಿಗೆಯ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಬಗೆಯ ಹಣ್ಣುಗಳ ಮಾರಾಟ ಭರ್ಜರಿಯಾಗಿ ಸಾಗಿತ್ತು. ಕಲ್ಲಂಗಡಿ, ಖರ್ಬೂಜ, ಸೇಬು, ಕಿತ್ತಳೆ, ದ್ರಾಕ್ಷಿ ಸೇರಿದಂತೆ ಅನೇಕ ಬಗೆಯ ಹಣ್ಣುಗಳ ಮಾರಾಟ ಹೆಚ್ಚಾಗಿತ್ತು. ಶಿವರಾತ್ರಿ ಹಬ್ಬದಲ್ಲಿ ಹಣ್ಣುಗಳ ನೈವೇದ್ಯ ಮಾಡಲಾಗುತ್ತದೆ. ಅದಕ್ಕಾಗಿಯೇ ಮಾರುಕಟ್ಟೆಯಲ್ಲಿ ಅದರಲ್ಲೂ ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿತ್ತು. ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಿಂದ ಕಲ್ಲಂಗಡಿ ಹಣ್ಣುಗಳನ್ನು ತರಿಸಿದ್ದ ವ್ಯಾಪಾರಿಗಳು ಭಾರಿ ವ್ಯಾಪಾರದ ಸಂತಸಲ್ಲಿದ್ದರು.

# ಶ್ರೀ ಕರಿಬಸವೇಶ್ವರ ಜಾಗರಣೆ ಮತ್ತು ಜಾತ್ರಾ ಮಹೋತ್ಸವ



ದಾವಣಗೆರೆ : ನಗರದ ಲೇಬರ್ ಕಾಲೋನಿಯಲ್ಲಿರುವ ಶ್ರೀ ಗುರು ಕರಿಬಸವೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಫೆಬ್ರವರಿ 17 ರಿಂದ 20 ರ ವರೆಗೆ ಶ್ರೀ ಕರಿಬಸವೇಶ್ವರ ದೇವರ (ಉಕ್ಕಡಗಾತ್ರಿ ಅಜ್ಜಯ್ಯ) ಜಾಗರಣಾ ಮತ್ತು ಜಾತ್ರೆ ಮತ್ತು ಶಿವಾರಾತ್ರಿ ಮಹೋತ್ಸವ ನಡೆಯಲಿದೆ.

ಮಂಗಳವಾರ 17ರಂದು ಬೆಳಿಗ್ಗೆ 8ಗಂಟೆಗೆ ಮಹಾರುದ್ರಾಭಿಷೇಕ ನಂತರ ಮಹಾ ಮಹಾ ಮಂಗಳಾರತಿ. ಸಂಜೆ 7 ಗಂಟೆಗೆ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮದಿಂದ ಜಾಗರಣೆ ಪ್ರಾರಂಭ. ಬುಧವಾರ 18ರಂದು ಬೆಳಿಗ್ಗೆ, ಮಹಾ ಪೂಜೆ ನಂತರ ವಾದ್ಯ ವೈಭವಗಳೊಂದಿಗೆ. ಸ್ವಾಮಿಯ ಉತ್ಸವ ಮೆರವಣಿಗೆ ನಂತರ ಮಧ್ಯಾಹ್ನ ಒಂದು ಗಂಟೆಗೆ ಮಹಾ ಪ್ರಸಾದ ಸಂತರ್ಪಣೆ ನಡೆಯಲಿದೆ.

19 ಗುರುವಾರ ಬೆಳಿಗ್ಗೆ ಪೂಜೆ ಮತ್ತು ಪಲರಾ ಹಾಕಿಸುವುದು.

20 ಶುಕ್ರವಾರ ಸಂಜೆ ಮಹಾಪೂಜೆ ನಂತರ ಪಲಾರ ಹಂಚುವುದು.

ಎಲ್ಲಾ ಸದ್ಭಕ್ತರು ಈ ಎಲ್ಲಾ ಕಾರ್ಯಕ್ರಮಗಳಲ್ಲೊ ಭಾಗವಹಿಸಿ ತನು ಮನ ಧನದೊಂದಿಗೆ ಸಹಕರಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಲು ದೇವಸ್ಥಾನ ಸಮಿತಿ ಅಧ್ಯಕ್ಷರಾದ ಜೆ ಎನ್ ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಹಾಗೂ ಪ್ರಧಾನ ಅರ್ಚಕರಾದ ಪಿ ಎನ್ ಲೊಕೇಶಪ್ಪ ವಿನಂತಿಸಿದ್ದಾರೆ.

# ಯತೀಂದ್ರ ಸಿದ್ದರಾಮಯ್ಯ ನಮ್ಮ ಹೈಕಮಾಂಡ್: ಶಾಸಕ ಗಣಿಗ ವ್ಯಂಗ್ಯ

ಮಂಡ್ಯ: ಯತೀಂದ್ರ ಸಿದ್ದರಾಮಯ್ಯ ಅವರು ನಮ್ಮ ಹೈಕಮಾಂಡ್. ನಮಗೆ ಹೈಕಮಾಂಡ್ ನೋಟಿಸ್ ಕೊಡಬಹುದು. ಆದರೆ ಹೈಕಮಾಂಡ್‌ಗೆ ನಾವು ನೋಟೀಸ್ ಕೊಡಲು ಸಾಧ್ಯವಿಲ್ಲ ಎಂದು ಶಾಸಕ ಗಣಿಗ ರವಿಕುಮಾರ್ ವ್ಯಂಗ್ಯವಾಡಿದ್ದಾರೆ.

ಮಂಡ್ಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯತೀಂದ್ರ ಅವರು ನಮ್ಮ ಹೈಕಮಾಂಡ್ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ನಾನೂ ಅದನ್ನೇ ಪುನರ್ ಉಚ್ಚರಿಸುತ್ತೇನೆ. ಅವರು ನಮ್ಮ ಹೈಕಮಾಂಡ್ ಅನ್ನೋದನ್ನ 100 ಪರ್ಸೆಂಟ್ ಒಪ್ಪಿಕೊಳ್ಳುತ್ತೀವಿ. ಯಾರೂ ಸ್ಟೇಟ್‌ಮೆಂಟ್ ಕೊಡಬೇಡಿ ಅಂತ ನಾಲ್ಕು ಬಾರಿ ಹೇಳಿದರು. ಆದರು ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ ಅಂದ್ರೆ ಅವರು ಸುಪ್ರೀಂ. ಖರ್ಗೆಯವರಿಗಿಂತ ಜಾಸ್ತಿ, ಡಿಕೆ ಅವರಿಗಿಂತ ಕಡಿಮೆ ಅಂತ ಹೇಳೋದಕ್ಕೆ ಆಗಲ್ಲ. ಮಾತನಾಡಬೇಡಿ ಅಂದರೂ ಮಾತನಾಡುತ್ತಿದ್ದಾರೆ ಅಂದ್ರೆ ಪವರ್‌ಫುಲ್ ಮ್ಯಾನ್ ಎಂದು ಯತೀಂದ್ರ ವಿರುದ್ಧ ಕಿಡಿಕಾರಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲೇಬೇಕು. ಅವರು ಸಿಎಂ ಆಗೋದನ್ನ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಡಿಕೆಶಿ ರಾಜಕಾರಣವನ್ನು ಅರೆದು ಕುಡಿದಿದ್ದಾರೆ. ಯಾವಾಗ, ಯಾವ ಪಾನ್ ಮೂ ಮಾಡಿದ್ರೆ ಗೇಮ್ ಗೆಲ್ಲಬಹುದು ಅಂತ ಗೊತ್ತಿದೆ. ರಾಜಕೀಯ ತಂತ್ರಗಾರಿಕೆ, ಚಾಣಾಕ್ಷತನ ಅವರಿಗಿದೆ. ಗೆಲ್ಲುವ ಬುದ್ಧಿವಂತಿಕೆ ಇರೋದಕ್ಕೆ ಸೈಲೆಂಟಾಗಿ ಕಾಯಿನ್ ಮೂ ಮಾಡುತ್ತಿದ್ದಾರೆ ಎಂದರು.

## "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

### ಆದಿಮುದ್ರೆ: (ಪ್ರಾಥಮಿಕ ಮುದ್ರೆ)



"ಗೊರಕೆಯನ್ನು ಕಡಿಮೆ ಮಾಡಲು ಉತ್ತಮವಾದ ಮುದ್ರೆಯಾಗಿದೆ"

ಅರ್ಥ: ಸಂಸ್ಕೃತದಲ್ಲಿ ಆದಿ ಎಂದರೆ "ಮೊದಲು ಅಥವಾ ಪ್ರಾಥಮಿಕ". ಮುದ್ರೆ ಅಂದರೆ "ಸನ್ನೆ" ಇದು ತಾಯಿಯ ಗರ್ಭದಲ್ಲಿ ಭ್ರೂಣವು ಮಾಡುವ ಮೊದಲ ಕೈ ಮುಷ್ಟಿ ಭಂಗಿಯಾಗಿದೆ. ಇದನ್ನು "ನವಜಾತ ಮುಷ್ಟಿ"ಯಂತಲೂ ಕರೆಯುತ್ತಾರೆ.

ಮಾಡುವ ವಿಧಾನ: * ನೆಲದ ಮೇಲೆ ಸುಖಾಸನ, ಪದ್ಮಾಸನ ಅಥವಾ ವಜ್ರಾಸನದಲ್ಲಿ ಕುಳಿತುಕೊಳ್ಳಿ ಬೆನ್ನು, ಕತ್ತು ನೇರವಾಗಿ ಇರಲಿ. * ಹೆಬ್ಬೆರಳನ್ನು ಮಡಚಿ, ಅಂಗೈಯ ಒಳಭಾಗದಲ್ಲಿ ಇರಿಸಬೇಕು. (ಕಿರು ಬೆರಳಿನ ಬುಡದಲ್ಲಿ) * ಉಳಿದ ನಾಲ್ಕು ಬೆರಳುಗಳನ್ನು ಅದರ ಮೇಲೆ ಮೃದುವಾಗಿ ಮಡಚಿ, ಮುಷ್ಟಿ ಮಾಡಿಕೊಳ್ಳಬೇಕು. * ಕಣ್ಣುಗಳನ್ನು ಮುಚ್ಚಿ, ಆಳವಾದ ಮತ್ತು ನಿಧಾನವಾದ ಉಸಿರಾಟದ ಮೇಲೆ ಗಮನವನ್ನು ಕೇಂದ್ರೀಕರಿಸಿ. * ಸುಮಾರು 15 ರಿಂದ 20 ನಿಮಿಷಗಳ ಕಾಲ ಮಾಡುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು.

ಉಪಯೋಗಗಳು: * ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಮೆದುಳಿಗೆ ಆಮ್ಲಜನಕದ ಹರಿವನ್ನು ಸುಧಾರಿಸಲು ಸಹಾಯ ಮಾಡುತ್ತದೆ. * ಎದೆಯ ಭಾಗದಲ್ಲಿ ಉಸಿರಾಟವನ್ನು ಹೆಚ್ಚಿಸಿ, ಪ್ರಾಣಾಯಾಮಕ್ಕೆ ಸಹಾಯ ಮಾಡುತ್ತದೆ. * ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. * ಈ ಮುದ್ರೆಯು ಗಂಟಲು ಮತ್ತು ತಲೆಗೆ ಆಮ್ಲಜನಕದ ಹರಿವನ್ನು ಹೆಚ್ಚಿಸುವುದರಿಂದ ಗೊರಕೆ ಸಮಸ್ಯೆಯನ್ನು ಕಡಿಮೆ ಮಾಡಲು ಸಹಕಾರಿ. * ಹೊಟ್ಟೆ, ಯಕೃತ ಮತ್ತು ಕರುಳಿನ ಚಲನೆಯನ್ನು ಉತ್ತಮಗೊಳಿಸುತ್ತದೆ.

ಗಮನಿಸಿ: ಅಸ್ತಮಾ, ಅಧಿಕ ರಕ್ತದ ಒತ್ತಡ, ಹೃದಯ ಸಂಬಂಧಿ ಕಾಯಿಲೆಗಳಿರುವವರು ಈ ಮುದ್ರೆಯನ್ನು ಮಾಡಬಾರದು.

ಏನಾದರೂ ಸಂದೇಹಗಳಿದ್ದರೆ ಈ ನಂಬರಿಗೆ ಸಂಪರ್ಕಿಸಿ: 876208916

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

# ಕೊಟ್ಟೂರಲ್ಲಿ ಶಿವರಾತ್ರಿ ಸಂಭ್ರಮ ಧ್ಯಾನ, ಪೂಜೆ, ರುದ್ರಾಭಿಷೇಕ



ದಾ ನಗರವಾಣಿ ಸುದ್ದಿ

ಕೊಟ್ಟೂರು :ಮಹಾಶಿವರಾತ್ರಿ ಹಬ್ಬ ಇದೀಗ ಕೊಟ್ಟೂರಿನಲ್ಲಿ ನಡೆದ ಕೊಟ್ಟೂರೇಶ್ವರ ಜಾತ್ರೆಯ ಸಡಗರ ಸಂಭ್ರಮಕ್ಕೆ ಮತ್ತಷ್ಟು ಮೆರಗು ತಂದಿತ್ತು. ಕೊಟ್ಟೂರೇಶ್ವರನ ಜಪ ತಪ ಹಾಡುಗಳ ಮಾರ್ದನಿ ಪಟ್ಟಣದೆಲ್ಲೆಡೆ ಕಳೆದ ವಾರದಿಂದ ಮೊಳಗುತ್ತಿದ್ದರೆ ಕೊಟ್ಟೂರಿನಲ್ಲಿ ಇದರೊಟ್ಟಿಗೆ ಶಿವನಾಮ, ಜಪ ಓಂ ನಮಃ ಶಿವಾಯ ಮಂತ್ರಗಳ ಘೋಷಣೆ ಕೇಳಿ ಬಂದು ಆಸ್ತಿಕ ಭಕ್ತರ ಧಾರ್ಮಿಕ ಕಾರ್ಯಗಳಿಗೆ ಮುದ ನೀಡಿತು.

ಮಹಾ ಶಿವರಾತ್ರಿ ಅಂಗವಾಗಿ ಸಾವಿರಾರು ಭಕ್ತರು ಎಂದಿನಂತೆ ಉದ್ದನೆಯ ಸಾಲಿನೊಂದಿಗೆ ಕೊಟ್ಟೂರೇಶ್ವರ ಸ್ವಾಮಿಯ ದರ್ಶನಕ್ಕೆ ಆಗಮಿಸಿ ಭಕ್ತಿ ಸಮರ್ಪಿಸುವುದು ಬೆಳಗಿನಿಂದ ನಡೆದೇ ಇದೆ. ಬೆಳಗಿನ ಜಾವ ಶ್ರೀಕೊಟ್ಟೂರೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕದೊಂದಿಗೆ ಶಿವರಾತ್ರಿ ಆಚರಣೆಗೊಂಡಿತು. ಶ್ರೀಸ್ವಾಮಿಯ ಮೂರು ಪ್ರಮುಖ ಮಠಗಳಾದ ಹಿರೇಮಠ, ತೊಟ್ಟಿಲು ಮಠ, ಗಚ್ಚಿನಮಠಗಳಿಗೆ ದಂಡು ದಂಡಾಗಿ ಭಕ್ತರು ತೆರಳಿ ಪೂಜೆ ಸಲ್ಲಿಸಿದರು.

ಇಲ್ಲಿನ ಈಶ್ವರ ದೇವಸ್ಥಾನಗಳಾಗಿರುವ ಗದ್ದಿಕಲ್ಲೇಶ್ವರ, ಮಳೆಮಲ್ಲೇಶ್ವರ, ಸಿರಿಮಠಲಿಂಗೇಶ್ವರ, ಚಂದ್ರಮೌಳೇಶ್ವರ, ಮಾರ್ಕಂಡೇಶ್ವರ, 108 ಶಿವಲಿಂಗಗಳ ದೇವಸ್ಥಾನ, ಸೋಮಲಿಂಗೇಶ್ವರ, ರಾಮಲಿಂಗೇಶ್ವರ, ಹ್ಯಾಳ್ಯಾದ ಬಳಿಯ ಪಂಪಾಪತಿ ಪತೇಶ್ವರ, ಅಂಬಳಿಯ ಕಲ್ಲೇಶ್ವರ ಗುಡಿಗಳಿಗೆ ಭಕ್ತರು ಬೆಳಗ್ಗಿನಿಂದಲೇ ತೆರಳಿ ನಿರಂತರ ರುದ್ರಾಭಿಷೇಕ ಮತ್ತು ವಿಶೇಷ ಪೂಜೆಗಳನ್ನು ಕುಟುಂಬ ಸಮೇತರಾಗಿ ಸೇವೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಪಟ್ಟಣದ ಗದ್ದಿ ಕಲ್ಲೇಶ್ವರ ದೇವಸ್ಥಾನದ ಈಶ್ವರ ಲಿಂಗಮೂರ್ತಿಗೆ ಭಾನುವಾರ ರಾತ್ರಿಯುದ್ದಕ್ಕೂ ಮಹಾರುದ್ರಾಭಿಷೇಕ ಕೈಂಕರ್ಯ ನಿರಂತರ ಸಾಗಿದೆ.

ತಾಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದಲ್ಲೂ ಸಹ ಮಹಾಶಿವರಾತ್ರಿಯ ಸಡಗರ ಸಂಭ್ರಮ ಹೆಚ್ಚಾಗಿ ಕಂಡುಬಂತು. ರಾತ್ರಿ ಸದ್ಧರ್ಮ ಪೀಠದ ಒಡೆಯ ಮಹಾಮರುಳಸಿದ್ಧ ಸ್ವಾಮಿಯ ಲಿಂಗಮೂರ್ತಿಗೆ ವಿಶೇಷ ಪೂಜಾ ಮಹಾರುದ್ರಾಭಿಷೇಕ ಕೈಂಕರ್ಯ ನೆರವೇರಿದವು. ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಮರುಳಸಿದ್ದೇಶ್ವರ ಸ್ವಾಮಿಯ ಮೂಲ ಮೂರ್ತಿಗೆ ಮಹಾ ರುದ್ರಾಭಿಷೇಕದೊಂದಿಗೆ ಕ್ಷೀರವನ್ನು ಎರೆದು ವಿವಿಧ ಪೂಜೆ ಸಲ್ಲಿಸಿದರು.ಭಜನೆ ಮತ್ತು ಶಿವಕೀರ್ತನೆಯ ಭಕ್ತಿ ಸಂಗೀತ ಕಾರ್ಯಕ್ರಮ ನಡೆದವು.

# ಮನೆಯ ಬಾಗಿಲಿಗೆ ಕಿಡಿಗೇಡಿಗಳಿಂದ ವಾಮಾಚಾರ



ದಾ.ನಗರವಾಣಿ ಸುದ್ದಿ,

ಜಗಳೂರು,ಫೆ.15: ಮನೆಯ ಬಾಗಿಲಿನಲ್ಲಿ ಕಿಡಿಗೇಡಿಗಳು ವಾಮಾಚಾರ ಮಾಡಿದ್ದು, ಕುಟುಂಬಸ್ಥರು ಹಾಗೂ ಮನೆಯ ನೆರೆಹೊರೆಯ ಜನರು ಆತಂಕಕ್ಕೀಡಾಗಿದ್ದಾರೆ.

ತಾಲೂಕಿನ ಚಿಕ್ಕಮಲ್ಲನಹೊಳೆ ಗ್ರಾಮದ ಗುಡೆ–ಕೋಟೆ ದುರುಗೇಶ್ ಎಂಬ ವ್ಯಕ್ತಿಯ ಮನೆಯ ಬಾಗಿಲಿನಲ್ಲಿ ಶನಿವಾರ ಮಧ್ಯೆ ರಾತ್ರಿ 11.30 ಗಂಟೆ ಸುಮಾರಿಗೆ ಯಾರೋ ಕಿಡಿಗೇಡಿಗಳು ನಿಂಬೆ ಹಣ್ಣು, ಮೊಟ್ಟೆ, ಇದ್ದಿಲು, ಕುಂಕುಮ, ಒಣ ಮೆಣಸಿನಕಾಯಿ, ಎಕ್ಕೆಯ ಹೂ, ರೂಪಾಯಿ ಕಾಯಿನ್ ಬಳಸಿ ವಾಮಾಚಾರ ಮಾಡಿದ್ದಾರೆ.

ದುರುಗೇಶ್ ಪತ್ನಿ ಮಾರಕ್ಕ ಮಕ್ಕಳು ಎಂದಿನಂತೆ ರಾತ್ರಿ ಸಮಯದಲ್ಲಿ ಊಟಮುಗಿಸಿ ಬಾಗಿಲು ಹಾಕಿಕೊಂಡು ಮಲಗಿದ್ದಾರೆ. ಕೋಳಿ ಡೀಲರ್ ಆಗಿ ಕೆಲಸ ಮಾಡುವ ದುರುಗೇಶ್ ದಿನ ನಿತ್ಯದ ಕೆಲಸ ಮುಗಿಸಿಕೊಂಡು ಶನಿವಾರ ರಾತ್ರಿ 12 ಗಂಟೆ ಸುಮಾರಿಗೆ ಮನೆಗೆ ಬಂದು ಕದ ತಟ್ಟಿದ್ದಾರೆ. ಪತ್ನಿ ಹೊರಗಿನ ಲೈಟ್ ಆನ್ ಮಾಡಿ ಕದ ತೆರೆದಾಗ ಮನೆಯ ಬಾಗಿಲಿನಲ್ಲಿಯೇ ವಾಮಾಚಾರ ಮಾಡಿರುವುದು ಬೆಳಕಿಗೆ ಬಂದಿದೆ.

ಮೂರು ದಾರಿಯಲ್ಲಿ, ಅಮಾವಾಸೆ, ಹುಣ್ಣಿಮೆಗೆ ವಾಮಾಚಾರ ಮಾಡುವುದು ಕೇಳಿದ್ದೇನೆ ಅಲ್ಲದೇ ಹೀಗೆ ಮನೆಯ ಬಾಗಿಲಿನಲ್ಲಿಟ್ಟು ವಾಮಾಚಾರ ಮಾಡಿರುವುದು ನೋಡಿರುವುದು ಮೊದಲು, ದ್ವೇಷವಿದ್ದರೆ ಎದುರಿಗೆ ಬಂದು ಮಾತಾಡಲಿ ಇಂತಹ ನೀಚ ಕೃತ್ಯ–ಕ್ಕೆ ಕೈ ಹಾಕಬಾರದು. ನಮ್ಮ ಮನೆಯ ಬಾಗಿಲಿನಲ್ಲಿನ ವಾಮಾಚಾರಕ್ಕೆ ಅಕ್ಕಪಕ್ಕದ ಮನೆಯವರು ಸಹ ಹೆದುರಿಕೊಂಡಿದ್ದಾರೆ ಮನೆಯವರನ್ನು ಚಿಂತೆಗೀಡು ಮಾಡಿದೆ ಎಂದು ದುರುಗೇಶ್ ಚಿಕ್ಕಮಲ್ಲನಹೊಳೆ ತಿಳಿಸಿದ್ದಾರೆ.

# ಹರಪನಹಳ್ಳಿ; ಶ್ರದ್ಧಾ ಭಕ್ತಿಯಿಂದ ಮಹಾಶಿವರಾತ್ರಿ ಆಚರಣೆ



ಹರಪನಹಳ್ಳಿ : ತಾಲೂಕಿನಲ್ಲಿ ಅತ್ಯಂತ ಭಕ್ತಿ, ಶ್ರದ್ದೆಯಿಂದ ಮಹಾ ಶಿವರಾತ್ರಿ ಯನ್ನು ಜನರು ಭಾನುವಾರ ಆಚರಿಸಿದರು.

ಪಟ್ಟಣದ ಗೋಕರ್ಣೇಶ್ವರ ದೇವಾಲಯ, ನಗರೇಶ್ವರ, ಎಸ್ ಬಿಎಂ ಬಳಿ ಇರುವ ಶಿವ ದೇವಾಲಯ, ಹಾಗೂ ಗಣೇಶ ದೇವಸ್ಥಾನದ ಶಿವ ದೇವಾಲಯ, ಬೆಸ್ಕಾಂ ಕಛೇರಿ ಬಳಿ, ಕೊಟ್ಟೂರು ರಸ್ತೆ ಚೌಕಿಯಲ್ಲಿರುವ ಶಿವನ ದೇವಾಲಯ ಹೀಗೆ ವಿವಿಧೆಡೆ ಶಿವ ದೇವಾಲಯಗಳಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಅನೇಕರು ಉಪವಾಸ ವಿದ್ದು, ಶಿವನಿಗೆ ಭಕ್ತಿ ಸಮರ್ಪಿಸಿದರು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಬಾಗಳಿಯ ಐತಿಹಾಸಿಕ ಕಲ್ಲೇಶ್ವರ ದೇವಾಲಯದಲ್ಲಿ ಬೇರೆ ಬೇರೆ ಗ್ರಾಮಗಳ ಭಕ್ತರು ಆಗಮಿಸಿ ಅಭಿಷೇಕ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು.

ಕೂಲಹಳ್ಳಿಯ ಗೋಣಿ ಬಸವೇಶ್ವರ, ನೀಲಗುಂದ ಭೀಮೇಶ್ವರ ದೇವಸ್ಥಾನಗಳಲ್ಲಿ ಆಕರ್ಷಕ ಪೂಜೆ ನೆರವೇರಿತು. ಗೋಕರ್ಣೇಶ್ವರ ದೇವಾಲಯದಲ್ಲಿ ಸಾಲುಗಟ್ಟಿ ಭಕ್ತರು ಶಿವನ ದರ್ಶನ ಪಡೆದರು. ದಿ|| ವಕೀಲ ದಿವಾಕರ ಕುಟುಂಬದವರು ಪ್ರಸಾದ ವಿತರಣೆ ನಡೆಸಿದರು. ಅರ್ಚಕ ಸತೀಶ ಭಟ್ ಇತರರು ಇಲ್ಲಿ ಪೂಜಾ ಕಾರ್ಯದಲ್ಲಿ ತೊಡಗಿದ್ದರು. ಬೆಳಿಗ್ಗೆಯಿಂದಲೇ ಭಕ್ತರು ಶಿವನ ದೇವಾಲಯಗಳಿಗೆ ತೆರಳಿದರೂ ಸಂಜೆ ಹೊತ್ತಿಗೆ ಭಕ್ತರ ಸಂಖ್ಯೆ ಹೆಚ್ಚಾಗಿತ್ತು.

ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹಣ್ಣು ಸೇರಿದಂತೆ ವಿವಿಧ ಬಗೆಯ ಹಣ್ಣು ಗಳಿಗೆ ಭಾರಿ ಬೇಡಿಕೆ ಉಂಟಾಗಿ–ತ್ತು. ಹೂವು, ಕಾಯಿ ವ್ಯಾಪಾರ ಜೋರಾಗಿತ್ತು, ಬೆಲೆಯೂ ಎಂದಿಗಿಂತ ಸಾಕಷ್ಟು ಹೆಚ್ಚಾಗಿತ್ತು, ಆದರೂ ಜನರ ಖರೀದಿಗೆ ಬರವಿದ್ದಿಲ್ಲ.

# ಇಂದಿನಿಂದ ಸರ್ಕಾರಿ ಬಸ್‌ಗಳಲ್ಲಿ ಸಾಗಿಸುವ ಲಗೇಜ್ ದರ ಹೆಚ್ಚಳ

ಬೆಂಗಳೂರು: ನಾಳೆಯಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಕ ರಹಿತವಾಗಿ ಸಾಗಿಸುವ ಲಗೇಜ್ ದರ ಹೆಚ್ಚಳವಾಗಲಿದ್ದು, ನೂತನ ಪರಿಷ್ಕೃತ ದರ ಜಾರಿಯಾಗಲಿದೆ.

ಈ ಬಗ್ಗೆ ಕೆಎಸ್‌ಆರ್‌ಟಿಸಿ ಎಂಡಿ ಅಕ್ರಂ ಪಾಷಾರಿಂದ ಮಾಹಿತಿ ನೀಡಿದ್ದು, ನಾಳೆಯಿಂದ (ಫೆ.16) ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಕ ರಹಿತವಾಗಿ ಸಾಗಿಸುವ ಲಗೇಜ್‌ಗೆ ನೂತನ ಪರಿಷ್ಕೃತ ದರ ಜಾರಿಗೆಯಾಗಲಿದೆ ಎಂದು ಆದೇಶ ಹೊರಡಿಸಿದ್ದಾರೆ. ಡಿಸೇಲ್, ಸಿಬ್ಬಂದಿ ಹಾಗೂ ಇತರೆ ಖರ್ಚುಗಳ ಹಿನ್ನೆಲೆ ಲಗೇಜ್ ದರ ಏರಿಕೆ ಮಾಡಲಾಗಿದೆ. ಈ ಮೊದಲು 2021ರಲ್ಲಿ ಲಗೇಜ್ ದರ ಏರಿಕೆಯಾಗಿತ್ತು. ಅದಾದ ಬಳಿಕ ಟಿಕೆಟ್ ದರ ಪರಿಷ್ಕರಣೆ ಆದಾಗ ಲಗೇಜ್ ದರ ಏರಿಕೆಯಾಗಿರಲಿಲ್ಲ ಎಂದಿದ್ದಾರೆ.

ವಸಂತ 4K DOLBY ATMOS
ದಿನ 4 ಆಟಗಳು
13.02.2026ರಿಂದ ಪ್ರಾರಂಭ
Tickets are available in bookmyshow
ಹಿಂದಿ ಚಿತ್ರ
ಸಮಯ: ಬೆಳಿಗ್ಗೆ 10.45ಕ್ಕೆ, ಮಧ್ಯಾಹ್ನ:2ಕ್ಕೆ ಸಂಜೆ: 5.45ಕ್ಕೆ, ರಾತ್ರಿ: 9ಕ್ಕೆ




ಅಶೋಕ DOLBY DIGITAL dts
ದಿನ 4 ಆಟಗಳು
ಜನಭರಿತ 2ನೇ ವಾರ
ticket avabale bookmyshow
ತೆಲುಗು ಚಿತ್ರ
ಸಮಯ: ಬೆ:11ಕ್ಕೆ, ಮ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

ಗೀತಾಂಜಲಿ DOLBY DIGITAL dts
ದಿನ 4 ಆಟಗಳು
ಜನಭರಿತ 4ನೇ ವಾರ
ಕನ್ನಡ ಚಿತ್ರ
ಬೆ: 11–ಕ್ಕೆ, ಮ: 2–ಕ್ಕೆ ಸಂ: 6–ಕ್ಕೆ:




ರಾ–9–ಕ್ಕೆ



# ಕ್ರೀಡೆ ಜೊತೆಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಿ



## ವೈ.ಡಿ.ಅಣ್ಣಪ್ಪ

ದಾ ನಗರವಾಣಿ ಸುದ್ದಿ

ಹರಪನಹಳ್ಳಿ: ಸ್ನೇಹ ಜೀವಿ ಕ್ರಿಕೆಟರ್ಸ್ ವತಿಯಿಂದ ಉತ್ತಮ ಆಯೋಜನೆ ಮಾಡಿದ್ದಾರೆ, ಆಟ ಆಡಿಸುವುದು ಮುಖ್ಯವಲ್ಲ, ಹೊರಗಿನಿಂದ ಬಂದಂತಹ ಕ್ರೀಡಾ ಪಟುಗಳಿಗೆ ಸೂಕ್ತ ವ್ಯವಸ್ಥೆ ಮಾಡಿರುವುದು ಖುಷಿಯಾಗಿದೆ. ಎಂದು ಬಿಡಿಸಿಸಿ. ಬ್ಯಾಂಕ್ ನಿರ್ದೇಶಕ ವೈ.ಡಿ.ಅಣ್ಣಪ್ಪ ಪ್ರತಿಪಾದಿಸಿದರು.

ತಾಲೂಕಿನ ಅರಸೀಕೆರೆ ಗ್ರಾಮದ ಸ್ನೇಹ ಜೀವಿ ಕ್ರಿಕೆಟರ್ಸ್ ವತಿಯಿಂದ 15 ನೇ ವರ್ಷದ ಸ್ಟ್ಯಾಂಪರ್ ಬಾಲ್ ಕ್ರಿಕೆಟ್ ಟೂರ್ನಿಮೆಂಟ್ ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿ ಅವರು, ಸ್ನೇಹ ಜೀವಿ ಕ್ರಿಕೆಟರ್ಸ್ ವತಿಯಿಂದ ಉತ್ತಮ ಆಯೋಜನೆ ಮಾಡಿದ್ದಾರೆ, ಆಟ ಆಡಿಸುವುದು ಮುಖ್ಯವಲ್ಲ, ಹೊರಗಿನಿಂದ ಬಂದಂತಹ ಕ್ರೀಡಾ ಪಟುಗಳಿಗೆ ಸೂಕ್ತ ವ್ಯವಸ್ಥೆ ಮಾಡಿರುವುದು ಖುಷಿಯಾಗಿದೆ.

ಗ್ರಾಮದಲ್ಲಿ ಕ್ರಿಕೆಟ್, ಕಬಡ್ಡಿ, ಬ್ಯಾಟ್ ಮಿಟನ್ ಆಟಗಳ ಟೂರ್ನಿಮೆಂಟ್ ಆಡಿಸುತ್ತಾ ಬಂದಿದ್ದೇವೆ, ನಮ್ಮ ಗ್ರಾಮದ ವಿದ್ಯಾರ್ಥಿಗಳು ಚನ್ನಾಗಿ ಓದಬೇಕಾಗಿದೆ, ಎಲ್ಲಾ ವಸ್ತುಗಳನ್ನು ಕದಿಯಬಹುದು,ಆದರೆ ವಿದ್ಯೆಯನ್ನು ಮಾತ್ರ ಕದಿಯಲು ಸಾಧ್ಯವಿಲ್ಲ ಎಂದರು.

ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಿ, ಇತ್ತೀಚಿನ ದಿನಗಳಲ್ಲಿ ನಾಟಕಗಳು ಮರೆಯಾಗುತ್ತಿವೆ, ನಾಟಕಗಳ ಪ್ರದರ್ಶನ ಹೆಚ್ಚಾಗಬೇಕು, ಎಲ್ಲಾ ಕ್ರೀಡೆಗಳಿಗೂ ಪ್ರೋತ್ಸಾಹ ನೀಡುತ್ತಾ ಬಂದಿದ್ದೇವೆ ಎಂದು ಹೇಳಿದರು.

ಪಾಟೀಲ್ ಆಗ್ರೋ ಏಜೆನ್ಸಿ ಮಾಲೀಕರಾದ ಪ್ರಶಾಂತ್ ಪಾಟೀಲ್ ಮಾತನಾಡಿ ನಾನು ಚಿಕ್ಕವನಿದ್ದಾಗಿನಿಂದಲೂ ಕ್ರಿಕೆಟ್ ಕ್ಯಾಪ್ಟನ್ ಆಗಿ ಸ್ನೇಹ ಜೀವಿ ಕ್ರಿಕೆಟರ್ಸ್ ವತಿಯಿಂದ ಆಡುತ್ತಾ ಬಂದಿದ್ದೇನೆ. ಶಿವರಾತ್ರಿ ಹಬ್ಬದ ಪ್ರಯುಕ್ತ ಪಂದ್ಯಾವಳಿಗಳನ್ನು ನಡೆಸುತ್ತಿದ್ದೇವೆ, ಕ್ರಿ–ಕೆಟ್ ಅನ್ನುವುದು ಒಂದು ದೊಡ್ಡ ಮರವಿದ್ದ ಹಾಗೆ, ಹೊಸ ಪ್ರತಿಭೆಗಳು ಬೆಳೆಯಬೇಕು, ಗ್ರಾಮೀಣ ಭಾಗದ ಕ್ರೀಡಾಪಟುವಾದ 'ವೈಭವ ವಂಶಿ' ಮಿಷಿನ್ ತರ ಆಡುತ್ತಿದ್ದಾನೆ, ಇವನು ಹಳ್ಳಿಯಲ್ಲಿ ಹುಟ್ಟಿ ಪ್ರತಿಭೆಯನ್ನು ಹೊರ ಹಾಕಿದ್ದಾನೆ ಎಂದರು.

ಈ ರೀತಿಯಾಗಿ ನಮ್ಮ ಊರಿನ ಪ್ರತಿಭೆಗಳಿಗೆ ಅವಕಾಶ ಸಿಗಲಿ,ನಮ್ಮ ಊರ ಮಣ್ಣಿನ ಗುಣ ಹಾಗೇ ಇದೆ, ಗ್ರಾಮೀಣ ಭಾಗದ ಪ್ರತಿಭೆಗಳು ಬೆಳೆಯಲಿ.

ಯುವಕರು ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯ ಕಾಳಜಿ ವಹಿಸಿ ನಮ್ಮ ಊರು, ತಾಲ್ಲೂಕು,ಜಿಲ್ಲೆ, ರಾಜ್ಯಕ್ಕೆ ಹೆಸರು ತರುವಂತರಾಗಲಿ ಎಂದು ಹೇಳಿದರು.

ಈ ಕ್ರಿಕೆಟ್ ಟೂರ್ನಿಮೆಂಟ್‌ನಲ್ಲಿ 18 ತಂಡಗಳು ಭಾಗವಹಿಸಿದ್ದವು. ಇದೇ ಸಂದರ್ಭದಲ್ಲಿ ವೈ.ಡಿ.ಅಣ್ಣಪ್ಪ, ಪ್ರಶಾಂತ್ ಪಾಟೀಲ್,ತಿಮ್ಮಲಾಪುರ ಪರುಸಪ್ಪ, ನಿಚ್ಚವ್ವನಹಳ್ಳಿ ಸುರೇಶ್, ಕೊಟ್ರೇಶ್, ಕೆ.ಮಹೇಶ್, ವೈಶಾಕ್ ಪಾಟೀಲ್, ಜನಪ್ರಿಯ ಮುಖಂಡ ಟಿ.ಬಿ.ರಾಜು ಸೇರಿದಂತೆ,ಸ್ನೇಹಜೀವಿಬಳಗದವರು,ಕ್ರೀಡಾಪಟುಗಳು, ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ದೇಶಾಭಿಮಾನ ಜಾಗೃತಿಗೆ ಹರಿಹರದ ಸಿಂಧು ಸಮಿತಿ ಕೊಡುಗೆ ಅನನ್ಯ: ಹರೀಶ್

ದಾ ನಗರವಾಣಿ ಸುದ್ದಿ

ಹರಿಹರ: ಸನಾತನ ಸಿಂಧು ಸಮಿತಿಯವರು ಧಾರ್ಮಿಕ, ರಾಷ್ಟ್ರೀಯ, ದೇಶ ಅಭಿಮಾನದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಲಿ ನನ್ನ ಸಂಪೂರ್ಣ ಸಹಕಾರ ಯಾವತ್ತೂ ಇರುತ್ತದೆ ಎಂದು ಶಾಸಕ ಬಿ.ಪಿ ಹರೀಶ್ ಹೇಳಿದರು.

ನಗರದ ಓಂಕಾರ ಮಠದಲ್ಲಿ ಶನಿವಾರ ಹರಿಹರದ ಸನಾತನ ಸಿಂಧು ಸಮಿತಿಯಿಂದ ಆಯೋಜಿಸಿದ್ದ ಧನ್ಯತಾ ಸಮರ್ಪಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು,

ಇತ್ತೀಚಿನ ದಿನಗಳಲ್ಲಿ ಹರಿಹರದಲ್ಲಿ ನಡೆಯುವ ಹಿಂದೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರು ಹೆಚ್ಚು ಪ್ರಮುಖ ಪಾತ್ರ ವಹಿಸುತ್ತಿರುವುದು ಕಂಡುಬರುತ್ತಿದೆ ಅದೇ ರೀತಿ 168 ಮಹಿಳೆಯರು ವಂದೇ ಮಾತರಂ ಗೀತೆಯನ್ನು ಏಕಕಂಠದಲ್ಲಿ ಹೇಳುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಕಾರಣೀಭೂತರಾಗಿದ್ದಾರೆ ಎಂದರು.

ಮುಂದಿನ ವರ್ಷ ಮಹಾರಾಷ್ಟ್ರದಲ್ಲಿ ನಡೆಯಲಿರುವ ತರಳುಬಾಳು ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಹರಿಹರದ 168 ಮಹಿಳೆಯರನ್ನು ಕರೆದುಕೊಂಡು ಹೋಗಿ 'ವಂದೇ ಮಾತರಂ' ಗೀತೆಯನ್ನು ಹೇಳಿಸಬೇಕೆಂಬ ಅಭಿಲಾಷೆಯಿದ್ದು ಹರಿಹರೇಶ್ವರನ ಕೃಪೆಯಿಂದ ನೆರವೇರಲಿ ಎಂದರು.

ಮಾಜಿ ಶಾಸಕ ಹೆಚ್.ಎಸ್ ಶಿವಶಂಕರ್ ಮಾತನಾಡಿ, ಮಹಾನ್ ಬರಹಗಾರರು ಮತ್ತು ಚಿಂತಕರಾದ ಬಂಕಿಮ್ ಚಂದ್ರ ಚಟರ್ಜಿ ಅವರಿಂದ 1870ರಲ್ಲಿ ರಚನೆಯಾದ 'ವಂದೇ ಮಾತರಂ' ಗೀತೆಯು ಸ್ವಾತಂತ್ರ್ಯ ಹೋರಾಟದ ಮೂಲ ಮಂತ್ರವಾಯಿತು. ಈ ಹಿಂದೆ ಗೀತೆಯನ್ನು ನಾವುಗಳು ದೂರದರ್ಶನ, ರೇಡಿಯೋಗಳಲ್ಲಿ ನಿತ್ಯ ಬೆಳಿಗ್ಗೆ ಕೇಳುತ್ತಿದ್ದ ನೆನಪು ಮಾಸಿಲ್ಲ ಎಂದರು.

ಸನಾತನ ಸಿಂಧು ಸಮಿತಿಯವರು ಧಾರ್ಮಿಕ ದೇಶ ಅಭಿಮಾನ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ ನಾನು ಕೂಡ




ನಿಮ್ಮೊಂದಿಗೆ ಇದ್ದೇನೆ ಎಂದು ಹೇಳಿದರು.

ಹರಿಹರದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಆತ್ಮಾ ದೀಪಾನಂದ ಮಹಾರಾಜ್ ಸಾನಿಧ್ಯ ವಹಿಸಿ ಮಾತನಾಡಿ, ಹರಿಹರದ ಸನಾತನ ಸಿಂಧು ಸಮಿತಿಯವರು 'ವಂದೇ ಮಾತರಂ' ಗೀತೆಯ 150ನೇ ವಾರ್ಷಿಕೋತ್ಸವವನ್ನು ಆಯೋಜನೆ ಮಾಡಿರುವುದು ಒಂದು ಒಳ್ಳೆಯ ಆಲೋಚನೆ, ಅದ್ಭುತ ವಾದ ಕಾರ್ಯಕ್ರಮವಾಗಿದೆ ಎಂದು ಅವರು ಹೇಳಿದರು.

150 ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಹೇಳಿದಂತೆ ಮುಂದಿನ ನಾಗರಿಕತೆಯನ್ನು ಮಹಿಳೆಯರಿಂದಲೇ ನಿರ್ಮಾಣವಾಗುತ್ತದೆ ಎಂಬ ಮಾತುಗಳು ಇಂದು ನಿಜವಾಗುತ್ತಿದೆ 168ಕ್ಕೂ ಹೆಚ್ಚು ಮಹಿಳೆಯರು ತಮ್ಮ ಏಕಕಂಠದಲ್ಲಿ ವಂದೇ ಮಾತರಂ ಗೀತೆಯನ್ನು ಹೇಳುವ ಮೂಲಕ ಸನಾತನ ಹಿಂದು ಧರ್ಮದ ಸಂಸ್ಕೃತಿಯನ್ನು ಇಂದಿನ ಪೀಳಿಗೆಗೆ ತಿಳಿಸಿ ಬೆಳೆಸಲು ಸ್ಫೂರ್ತಿದಾಯಕವಾಗಿದ್ದಾರೆ ಎಂದು ಬಣ್ಣಿಸಿದರು.

ಸನಾತನ ಸಿಂಧು ಸಮಿತಿಯ ಅಧ್ಯಕ್ಷ ಡಾ. ಆರ್ ಖಮಿತ್ಕರ್ ಮಾತನಾಡಿ, ಹರಿಹರ ಸನಾತನ ಸಿಂಧು ಸಮಿತಿ ರಚನೆಯಾದ ನಂತರ ಮೊದಲನೆಯ ಕಾರ್ಯಕ್ರಮವನ್ನು ನಿತ್ಯ ಶ್ಲೋಕಗಳು ಎಂಬ ಕಿರು ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು ನಂತರ ಅತ್ಯಾದ್ಭುತ ಕಾರ್ಯಕ್ರಮವಾದ ವಂದೇ ಮಾತರಂ 150 ವರ್ಷ ಕಳೆದ ಹಿನ್ನೆಲೆಯಲ್ಲಿ ನಗರದ ಗಾಂಧಿ ಮೈದಾನದಲ್ಲಿ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಿ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರಿಂದ ವಂದೇ ಮಾತರಂ ಗೀತೆಯ ಮಹತ್ವದ ಬಗ್ಗೆ ನಮ್ಮ ನಗರದ ಜನತೆಗೆ ತಿಳಿಸುವ ಕಾರ್ಯವನ್ನು ಮಾಡಲಾಯಿತು.

ಮುಂಬರುವ ದಿನಗಳಲ್ಲಿ ನಮ್ಮ ಸಮಿತಿಯಿಂದ ಹಲವಾರು ರಾಷ್ಟ್ರೀಯ, ಧಾರ್ಮಿಕ ಕಾರ್ಯಕ್ರಮಗಳನ್ನ ಆಯೋಜಿಸುವ ಚಿಂತನೆಯಲ್ಲಿ ಇದ್ದು ಇದಕ್ಕೆ ತಮ್ಮೆಲ್ಲರ ಸಹಕಾರ ಸ್ಫೂರ್ತಿ ಅತ್ಯವಶ್ಯ ಎಂದು ಕೋರಿಕೊಂಡರು.

ಈ ವೇಳೆ ಮುಂಖಡರಾದ ಶಂಕರ್ ಖಟಾವಕರ್, ಎಂ.ವೀರೇಶ್ ಹನಗವಾಡಿ, ಚಂದ್ರಶೇಖರ ಪೂಜಾರ್, ಎಚ್.ಪಿ ಬಾಬಣ್ಣ, ವೀರಣ್ಣ ಯಾದವಾಡ, ಪ್ರಕಾಶ ಕೋಳೂರು, ಆರ್.ಆರ್.ಕಾಂತರಾಜ್, ಶಿವಪ್ರಕಾಶ್ ಶಾಸ್ತ್ರಿ, ಶ್ರೀಧರ್ ಶೆಟ್ಟಿ, ಜಿ.ಕೆ.ಮಲ್ಲಿಕಾರ್ಜುನ್, ಎಂ.ಆರ್. ಸತ್ಯನಾರಾಯಣ್ ರಾವ್, ಜಿ.ನಂಜಪ್ಪ, ಬಾಡಿ ನಾಗರಾಜ, ಅಜಿತ್ ಸವಂತ್, ಲಾದಿತ್ಯ ಮೆಹಲ್ವಾಡೆ, ಸುಂದರೇಶ, ಪ್ರಶಾಂತ್, ರವಿ ಸಿಂಗ್, ನಾಗರಾಜ್ ನಲ್ಲೂರು, ನಾಗಮಣಿ ಶಾಸ್ತ್ರಿ, ಸುಮನ್ ಖಮಿತ್ಕರ್, ಪ್ರಮೀಳಾ ನಲ್ಲೂರು, ಸಾಕ್ಷಿಶಿಂಧೆ, ರೂಪಾಕಾಟ್ಟೆ, ರೂಪಾಶಶಿಕಾಂತ್, ಶಾರದಾಶಾಸ್ತ್ರಿ ರೇಷ್ಮಾ ಮೆಹರ್ವಾಡೆ ಹಾಗೂ ಇತರರಿದ್ದರು.

**ಮರ ಬೆಳೆಸಿ ಬರ ತೊಲಗಿಸಿ**

# ದುರ್ಗಾಂಬಿಕಾ ಜಾತ್ರೆ ಉತ್ಸವಕ್ಕಾಗಿ ಇಂದು ಆಲ್ಬಂ ಸಾಂಗ್ ಬಿಡುಗಡೆ

ದಾವಣಗೆರೆ.ಫೆ,15: ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವ ಪ್ರಯುಕ್ತ ಸಿದ್ಧಪಡಿಸಿರುವ ವಿಶೇಷ ಆಲ್ಬಂ ಸಾಂಗ್ ಫೆ.16ರಂದು ಸಂಜೆ 5.30ಕ್ಕೆ ನಗರದ ಜೆ.ಹೆಚ್.ಪಟೇಲ್ ಕಾಲೇಜಿನಲ್ಲಿ ಬಿಡುಗಡೆಗೊಳ್ಳಲಿದೆ ಎಂದು ಕಲಾವಿದ ರಾಕಿ ಸೋಮ್ಲಿ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಬರೆದಿರುವ ಗೀತೆಗೆ ಪವನ್ ಪಾರ್ಥ ಸಂಗೀತ ನಿರ್ದೇಶನ ಮಾಡಿದ್ದಾರೆ. ಅಭಿಷೇಕ್ ಮಠ ನೃತ್ಯ ಸಂಯೋಜಿಸಿದ್ದು, ಮುಸ್ತಾಫ್, ಜ್ಯೋತಿ ಮ್ಯೂಸಿಕ್ ಹಾಗೂ ಬಿ.ಜಿ.ಅಜಯಕುಮಾರ್ ಚಿತ್ರೀಕರಣದ ನಿರ್ಮಾಣ ಹೊಣೆ ಹೊತ್ತಿದ್ದಾರೆ. ಹ್ಯಾಪಿ ಇವೆಂಟ್ಸ್ ನ ಕಾರ್ತಿಕ್ ಮಾರ್ಕೆಟಿಂಗ್ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

4.30 ನಿಮಿಷ ಅವಧಿಯ ಗೀತೆಗೆ ಅನಿರುದ್ಧ ಶಾಸ್ತ್ರಿ, ಶಿವಾನಿ ನವೀನ್ ಧ್ವನಿಯಾಗಿದ್ದು, ತಾರಾಗಣದಲ್ಲಿ ರಾಜಿ ಸೋಮ್ಲಿ, ಮೋಹನ್ ಕುಮಾರ್, ಉಮೇಶ್, ಗುರು ಹವಾಲ್ದಾರ್, ಸತೀಶ್ ನಾಯ್ಕ, ತ್ರಿಬಾ, ಪ್ರಾತಿನ್ ಸಹಿತ ಹಲವು ಕಲಾವಿದರು ಕಾಣಿಸಿಕೊಂಡಿದ್ದಾರೆ ಎಂದರು.

ಪ್ರತಿ ಊರಿನ ಗ್ರಾಮ ದೇವತೆಗಳಿಗಾಗಿ ಈ ಹಾಡು ರಚಿಸಿದ್ದು, ದಾವಣಗೆರೆ ದುಗ್ಗಮ್ಮ ಜಾತ್ರೆ ಹಿನ್ನೆಲೆಯಲ್ಲಿ ಹಾಡನ್ನು ಬಿಡುಗಡೆಗೊಳಿಸುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಮೋಹನ್ ಕುಮಾರ್, ಕಾರ್ತಿಕ್, ಕಿರಣ್, ರಘು ಹಾಜರಿದ್ದರು.

# ಉಕ್ಕಡಗಾತ್ರಿ ರಥೋತ್ಸವಕ್ಕೆ...

(1ನೇ ಪುಟದಿಂದ) 7 ವಸತಿ ಕಟ್ಟಡಗಳಿಂದ 450 ಕೊಠಡಿಗಳ ಸೌಲಭ್ಯವಿದೆ. ರಥೋತ್ಸವದ ದಿನ ನಿರಂತರವಾಗಿ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ.

ಗದ್ದಿಗೆ ಪಕ್ಕದಲ್ಲಿ ಪ್ರಸ್ತುತ 40 ಸಾವಿರ ಚದರ ಅಡಿ ಜಾಗದಲ್ಲಿ ಬೃಹತ್ ದಾಸೋಹ ಕಟ್ಟಡ ನಿರ್ಮಾಣ ಪ್ರಾರಂಭವಾಗಿದೆ.

ಅಭಿವೃದ್ಧಿ ಪರ್ವ : ಭಕ್ತರು ನೀಡಿದ ದೇಣಿಗೆಯಿಂದ ಶ್ರೀ ಸ್ವಾಮಿಗೆ 2.5 ಕೆ.ಜಿ.ಯ ಚಿನ್ನದ ಕಿರೀಟ, 350 ಕೆ.ಜಿಯ ಬೆಳ್ಳಿ ರಥ, 30 ಕೆ.ಜಿ. ಬೆಳ್ಳಿಯಿಂದ ತಯಾರಿಸಿದ ಅಭಿಷೇಕ ಮಂಟಪ, 20 ಕೆ.ಜಿ. ತೂಕದ ಶ್ರೀ ಕರಿಬಸವೇಶ್ವರ ಸ್ವಾಮಿಯ ಉತ್ಸವ ಮೂರ್ತಿ, 28 ಸಾವಿರ ಅಡಿ ವಿಸ್ತೀರ್ಣದ ಬೃಹತ್ ಸಾಮೂಹಿಕ ವಸತಿ ವ್ಯವಸ್ಥೆ, ವಾಹನಗಳ ಪಾರ್ಕಿಂಗ್‌ಗಾಗಿ 15 ಎಕ–ರೆ ಜಮೀನು ಖರೀದಿ, ಭಕ್ತರಿಗಾಗಿ ನಿರಂತರ ಅನ್ನದಾಸೋಹ, ಗದ್ದಿಗೆ ಮುಂಭಾಗದಲ್ಲಿ ಶ್ರೀ ಕರಿಬಸವೇಶ್ವರಸ್ವಾಮಿ ವೇದಿಕೆ, ಬೃಹತ್ ವಿಸ್ತೀರ್ಣದ ಮೇಲ್ಛಾವಣಿಯನ್ನೂ ನಿರ್ಮಿಸಲಾಗಿದೆ.

ಸುಕ್ಷೇತ್ರದಲ್ಲಿ ಜ್ಞಾನ ದಾಸೋಹಾರ್ಥವಾಗಿ ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ಶ್ರೀ ಕರಿಬಸವೇಶ್ವರ ಗದ್ದಿಗೆ ವಿದ್ಯಾ ಸಂಸ್ಥೆಯಡಿಯಲ್ಲಿ ಸುಸಜ್ಜಿತ ನರ್ಸರಿ, ಪ್ರಾಥಮಿಕ (ಆಂಗ್ಲ ಮಾಧ್ಯಮ), ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ನಡೆಸಲಾಗುತ್ತಿದೆ.

# ರಾಜ್ಯ ಸರ್ಕಾರದ ಸಾವಿರ ದಿನಗಳ ಆಡಳಿತ 'ಸಾವಿರ ಕರಾಳ ದಿನ': ರೇಣುಕಾಚಾರ್ಯ ಟೀಕೆ



ದಾವಣಗೆರೆ:ಫೆ.15: 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸಾವಿರ ದಿನಗಳಾದರೂ ಅಭಿವೃದ್ಧಿ ಶೂನ್ಯವಾಗಿದೆ. ಇದು ಸಾಧನಾ ಸಮಾವೇಶವಲ್ಲ, ನಿಜವಾದ ಅರ್ಥದಲ್ಲಿ ಸಾವಿರ ದಿನಗಳ ಕರಾಳ ದಿನಾಚರಣೆ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಭಾನುವಾರ ಇಲ್ಲಿ ಲೇವಡಿ ಮಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಅಭಿವೃದ್ಧಿ ವಿಚಾರದಲ್ಲಿ ಶೂನ್ಯ ಸಾಧನೆ ಮಾಡಿರುವ ಈ ಸರ್ಕಾರ, ಲೂಟಿ ಮತ್ತು ಭ್ರಷ್ಟಾಚಾರದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಮೂಡಾದಲ್ಲಿ 3,500 ಕೋಟಿ ರೂ ಹಗರಣ ನಡೆದಿದ್ದು, ಸಿಎಂ ಅಕ್ರಮವಾಗಿ ಪಡೆದಿದ್ದ 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ವಾಲ್ಮೀಕಿ ನಿಗಮದ 178 ಕೋಟಿ ರೂ ಹಗರಣದಿಂದ ಸಚಿವರು ರಾಜೀನಾಮೆ ನೀಡುವಂತಾಯಿತು. ಗೃಹಲಕ್ಷ್ಮಿ ಯೋಜನೆಯ 5,000 ಕೋಟಿ ರೂ ಹಣದಲ್ಲೂ ಅಕ್ರಮ ನಡೆದಿದೆ," ಎಂದು ದೂರಿದರು.

"ಬೆಳಗಾವಿಯ ವಂಟಮೂರಿ ಘಟನೆ, ಹಾನಗಲ್ ಗ್ಯಾಂಗ್ ರೇಪ್, ಹುಬ್ಬಳ್ಳಿಯ ನೇಹಾ ಪ್ರಕರಣ ಹಾಗೂ ಮಂಗಳೂರಿನ ಆಸಿಡ್ ದಾಳಿಗಳು ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲ ಎಂಬುದಕ್ಕೆ ಸಾಕ್ಷಿ. ಡ್ರಗ್ಸ್, ಮಟ್ಕಾ, ಗಾಂಜಾ ದಂಧೆಗಳು ಎಗ್ಗಿಲ್ಲದೆ ಸಾಗುತ್ತಿದ್ದು, ಬಿಸ್ಕೆಟ್–ಚಾಕಲೇಟ್‌ನಲ್ಲೂ ಗಾಂಜಾ ಮಾರಾಟವಾಗುತ್ತಿದೆ. ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಎಂಬಂತಾಗಿದೆ," ಎಂದು ಆಕ್ರೋಶ ವ್ಯಕ್ತಪಡಿಸಿದರು.

"ಬಿಜೆಪಿ ಸರ್ಕಾರ ನೀಡುತ್ತಿದ್ದ ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆಯ 4,000 ರೂ ಪ್ರೋತ್ಸಾಹಧನ ಹಾಗೂ ರೈತ ಮಕ್ಕಳ 'ವಿದ್ಯಾನಿಧಿ' ಯೋಜನೆಯನ್ನು ಕಾಂಗ್ರೆಸ್ ಸ್ಥಗಿತಗೊಳಿಸಿದೆ. ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಮೀಸಲಿಟ್ಟಿದ್ದ 36,000 ಕೋಟಿ ರೂ ಅನುದಾನವನ್ನು ಗ್ಯಾರಂಟಿಗಳಿಗೆ ವರ್ಗಾಯಿಸಿ ದ್ರೋಹ ಎಸಗಲಾಗಿದೆ," ಎಂದರು.

"ಸಾಧನಾ ಸಮಾವೇಶಕ್ಕೆ ಜನರೇ ಬರುತ್ತಿಲ್ಲ. ಸಾರ್ವಜನಿಕರ ತೆರಿಗೆ ಹಣದಲ್ಲಿ ನಿಯೋಜಿಸಿದ್ದ ಸಾವಿರಾರು ಸರ್ಕಾರಿ ಬಸ್‌ಗಳು ಜನರಿಲ್ಲದೆ ಖಾಲಿ ಸಂಚರಿಸುತ್ತಿವೆ. ಇಂತಹ ಸಮಾವೇಶಕ್ಕೆ ಜನರ ಹಣ ಬೇಕಿತ್ತಾ? ತಮ್ಮ ಪಕ್ಷದ ಹಣ ಬಳಸಬಹುದಿತ್ತಲ್ಲವೇ?" ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್, ಮುಖಂಡರಾದ ಚಂದ್ರಶೇಖರ್ ಪೂಜಾರ್, ತಾರೇಶ ನಾಯ್ಕ, ಬಿ.ಎಂ. ಸತೀಶ್, ಎಚ್.ಪಿ. ವಿಶ್ವಾಸ್ ಉಪಸ್ಥಿತರಿದ್ದರು.

# ನಮ್ಮ ಪೊಲೀಸರು ದೇಶದಲ್ಲೇ ನಂ.1:...

(1ನೇ ಪುಟದಿಂದ)

ಏನ್ ಸರಿಯಿಲ್ಲ ಅಂತ ಅವರೇ ಹೇಳಬೇಕು. ಸುಖಾ ಸುಮ್ಮನೆ ಅಸಮರ್ಥ ಗೃಹ ಸಚಿವ ಅನ್ನೋದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಆಸ್ತಿ ವಿಚಾರಕ್ಕೆ ತಂದೆ–ತಾಯಿ ಜೊತೆ ಜಗಳ ಆಡ್ತಾರೆ, ಅದಕ್ಕೆ ಪೊಲೀಸ್ ಇಲಾಖೆ ಸರಿ ಇಲ್ಲ ಅಂ–ದ್ರೆ ಇವರ ಮನಸ್ಥಿತಿ ಹೇಗಿರಬೇಕು? ಪ್ರತಿಯೊಬ್ಬ ಪೊಲೀಸರು ಮಳೆ, ಗಾಳಿ, ಬಿಸಿಲೆನ್ನದೇ ಹಗಲು ರಾತ್ರಿ ದುಡಿಯುತ್ತಾರೆ. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಇರಬೇಕು ಅಂತ ಕೆಲಸ ಮಾಡ್ತಾರೆ. ಅವರ ಆತ್ಮವಿಶ್ವಾಸ ಕಳೆಯಬೇಡಿ ಎಂದು ತಿಳಿ ಹೇಳಿದ್ರು.


**CHANGE OF NAME**

I, CHANGERI MOHAMMED ASHRAF ALI (new name), previously called ASHRAF ALI (old name), R/o # 387/F, Lohar Mohalla, Ladwa Beedi, Harihar - 577601 Davangere, Karnataka State have changed my name as CHANGERI MOHAMMED ASHRAF ALIvide affidavit dated 13-02-2026 sworn before Notary B. Lingaraj., Davangere. Henceforth all my transactions & dealings will be in my new name CHANGERI MOHAMMED ASHRAF ALI.

**ಹೆಸರು ಸ್ಪಷ್ಟೀಕರಣ**

ಶಶಿಧರ ಜಿ ಎಸ್ ಬಿನ್ ಶಿವಪ್ಪ, ವಯಸ್ಸು : 52 ವರ್ಷ, ವಾಸ : ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ನಿವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಂಡತಿಯಾದ ಕವಿತ ಜೆ. ಇವರು ದಿನಾಂಕ 25–07–2011 ರಂದು ದಾವಣಗೆರೆಯ ಲತಾ ನರ್ಸಿಂಗ್ ಹೋಮ್ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು, ಮಗುವಿನ ಜನನ ಪ್ರಮಾಣ ಪತ್ರದಲ್ಲಿ ಇಂಧುಶ್ರೀ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ಸದರಿ ಮಗಳ ಹೆಸರನ್ನು ಸ್ವರ್ಣಗೌರಿ ಎಸ್ ಕೆ (SWARNA GOWRI S K) ಎಂದು ಸರಿಯಾಗಿಸಿ, ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಹಾಜರುಪಡಿಸಲು ದಿನಾಂಕ 30–01–2026 ರಂದು ಹೊಳಲ್ಕೆರೆ ನೋಟರಿ ಎಸ್. ಜಗದೀಶ್ ಅವರ ಬಳಿ ಮೇಲೆ ತಿಳಿಸಿದ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಪತ್ರ ಮಾಡಿಸಿರುತ್ತೇನೆ.

- ಶಶಿಧರ ಜಿ ಎಸ್ ಬಿನ್ ಶಿವಪ್ಪ

**CHANGE OF NAME**

I SHOBHA (OLD NAME) R/o 3307/1 A, 2ND CROSS 11TH MAIN, M C C B BLOCK, DAVANGERE, KARNATAKA - 577004 have changed my name as SHOBHA SIDDANAGOWDA (NEW NAME) vide affidavit sworn before Notary M PRATHAPARUDRA Davangere dated 02/01/2026





